**ದಿನಾಂಕ: 07-02-2013 ರಂದು ತೋಟಗಾರಿಕೆ ಸ್ಥಾಯಿ ಸಮಿತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಉದ್ಯಾನವನಗಳ ಅಭಿವೃದ್ಧಿ ಮತ್ತು ನಿರ್ವಹಣೆ ಹಾಗೂ ನಗರವ್ಯಾಪ್ತಿ ಅರಣ್ಯೀಕರಣ ಮತ್ತು ಪರಿಸರ ನಿರ್ವಹಣೆ ಮತ್ತು ಕೆರೆಗಳ ಅಭಿವೃದ್ಧಿ ಕಾಮಗಾರಿಗೆ ಸಂಬಂಧಪಟ್ಟಂತೆ ನಡೆದ ಸಭೆಯ ನಡವಳಿಗಳು**

| ಹಾಜರಿದ್ದ ಸದಸ್ಯರು<br>ಶ್ರೀಯುತರಾದ : | | | ಹಾಜರಿದ್ದ ಅಧಿಕಾರಿಗಳು<br>ಶ್ರೀಯುತರಾದ | |
|---|---|---|---|---|
| 1 | **ಶ್ರೀ.ವೈ.ಎನ್.ಅಶ್ವಥ್** | ಅಧ್ಯಕ್ಷರು | 1 | ಅಧಿಕ ಕೌನ್ಸಿಲ್ ಕಾರ್ಯದರ್ಶಿಗಳು |
| 2 | ಶ್ರೀ.ಎನ್.ಚಂದ್ರಶೇಖರ್‌ರಾಜು | | 2 | ಉಪ ಅರಣ್ಯ ಸಂರಕ್ಷಣಾಧಿಕಾರಿ(ಉತ್ತರ) & (ದಕ್ಷಿಣ) |
| 3 | ಶ್ರೀ.ಎಂ.ಸಿ.ಶ್ರೀನಿವಾಸ್ | ಸದಸ್ಯರು | 3 | ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ(ಉತ್ತರ) & (ದಕ್ಷಿಣ) |
| 4 | ಶ್ರೀಮತಿ.ಶಕುಂತಲ.ಎನ್ | ಸದಸ್ಯರು | 4 | ವಲಯ ಅರಣ್ಯಾಧಿಕಾರಿಗಳು-(**ಪೂರ್ವ/ಪಶ್ಚಿಮ/ ದಕ್ಷಿಣ/ ದಾಸರಹಳ್ಳಿ/** |
| 5 | ಶ್ರೀಮತಿ.ನಂದಿನಿ.ಕೆ | ಸದಸ್ಯರು | 5 | **ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ/ ರಾ.ರಾ.ನಗರ)** |
| 6 | ಶ್ರೀಮತಿ.ಲಕ್ಷ್ಮಿ | ಸದಸ್ಯರು | 6 | ಕಾರ್ಯಪಾಲಕ ಅಭಿಯಂತರರು (ಯೋಜನೆ-ಕೆರೆಗಳು) |
| 7 | ಶ್ರೀಮತಿ.ಸೀಮಾ ಖಾನಂ | ಸದಸ್ಯರು | 7 | ತೋಟಗಾರಿಕೆ ಅಧೀಕ್ಷಕರು - **(ಪೂರ್ವ/ಪಶ್ಚಿಮ/ದಕ್ಷಿಣ/ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ/ರಾ.ರಾ.ನಗರ)** |
| 8 | ಶ್ರೀ.ಎಮ್.ಶಿವರಾಜು | ಸದಸ್ಯರು | | |
| 9 | ಶ್ರೀಮತಿ.ಸರಳ | ಸದಸ್ಯರು | 8 | ಕಾ.ಪಾ.ಅ.(ಯೋಜನೆ - **(ಪೂರ್ವ/ ಪಶ್ಚಿಮ/ ದಕ್ಷಿಣ/ ದಾಸರಹಳ್ಳಿ/ ಬೊಮ್ಮನಹಳ್ಳಿ / ಯಲಹಂಕ/ ಮಹದೇವಪುರ/ ರಾ.ರಾ.ನಗರ)** |
| | | | 9 | **ಕಾ.ಪಾ.ಅ.(ಕೆರೆಗಳು-ಪರಿಸರ ಕೋಶ 1, 2, 3, 4, 5,)** |

**(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)**

ಮಾನ್ಯ ಅಧ್ಯಕ್ಷರು ಸಭೆಯ ಅಧ್ಯಕ್ಷತೆ ವಹಿಸಿ ಸಭೆಯಲ್ಲಿ ಹಾಜರಿದ್ದ ಸಮಿತಿ ಸದಸ್ಯರು ಹಾಗೂ ಅಧಿಕಾರಿಗಳಿಗೆ ಹೃತ್ಪೂರ್ವಕವಾದ ಸ್ವಾಗತ ಕೋರಿದರು.

ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಕೆರೆಗಳ ಅಭಿವೃದ್ಧಿ ಬಗ್ಗೆ ಟೆಂಡರ್ ಪ್ರಕ್ರಿಯೆ ಯಾವ ಯಾವ ಹಂತದಲ್ಲಿದೆ ಎಂಬುದರ ಬಗ್ಗೆ ಹಾಜರಿದ್ದ ಅಧಿಕಾರಿಗಳಿಗೆ ಮಾಹಿತಿ ನೀಡುವಂತೆ ಹಾಗೂ ಜರೂರಾಗಿ ಟೆಂಡರ್ ಪ್ರಕ್ರಿಯೆಯನ್ನು ಅನುಷ್ಠಾನಗೊಳಿಸಲು ಸೂಚಿಸಿದರು.

ನಗರವ್ಯಾಪ್ತಿ ಅರಣ್ಯೀಕರಣ ಮತ್ತು ಪರಿಸರ ನಿರ್ವಹಣೆ ಕಾಮಗಾರಿಗಳಿಗೆ ಈಗಾಗಲೇ (ಪಿ.ಓ.ಡಬ್ಲ್ಯೂ) ಕಾರ್ಯಕ್ರಮಕ್ಕೆ ಸಮಿತಿಯು ಅನುಮೋದನೆ ನೀಡಿದ್ದು, ಜರೂರಾಗಿ ಬಾಬ್ ಕೋಡ್ ಪಡೆದು ಕಾಮಗಾರಿಯನ್ನು ಕೈಗೊಳ್ಳಲು ಸೂಚಿಸಿದರು.

ಸಮಿತಿಯ ಮುಂದಿರುವ ವಿಷಯಗಳ ಬಗ್ಗೆ ಅಧ್ಯಕ್ಷರು, ಸಮಿತಿಯ ಸದಸ್ಯರು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿ, ಈ ಕೆಳಕಂಡಂತೆ ತೀರ್ಮಾನವನ್ನು ತೆಗೆದುಕೊಳ್ಳಲಾಯಿತು.

## 1. ವಿಷಯದ ಸಂಖ್ಯೆ:ತೋ/ಸ್ಥಾ/ಸ/28/12-13, ದಿನಾಂಕ:26-11-2012

ಮೆ॥ಸ್ಪರ್ಶ್ ಆರ್ಥೋಪೆಡಿಕ್ ಆಸ್ಪತ್ರೆಯವರು ಪಾಲಿಕೆ ವ್ಯಾಪ್ತಿಯಲ್ಲಿನ ಸರ್ಕಲ್ಸ್ ಮತ್ತು ಮೀಡಿಯನ್ಸ್ ಸ್ಥಳಗಳಲ್ಲಿ ಸ್ವಂತ ವೆಚ್ಚದಲ್ಲಿ ಭೂ ವಿನ್ಯಾಸ ಮತ್ತು ಅಭಿವೃದ್ಧಿಪಡಿಸಲು **ಈ ಕೆಳಕಂಡ ಸ್ಥಳಗಳನ್ನು ಐದು ವರ್ಷದ ಅವಧಿಗೆ ಹಂಚಿಕೆ** ಮಾಡುವಂತೆ ಮನವಿ ಸಲ್ಲಿಸಿರುತ್ತಾರೆ.

1. ಬ್ರಿಗೇಡ್ ಡಯಾಗನಲ್ ರಸ್ತೆ ವೃತ್ತ,
2. ಚಾಲುಕ್ಯ ಹೋಟೆಲ್ ಮುಂಭಾಗ ವೃತ್ತ,

ಮುಂದುವರೆದಿದೆ. . . .

3. ರೇಸ್ ಕೋರ್ಸ್ ರಸ್ತೆ, ಜನತಾದಳ ಕಛೇರಿ ಮುಂಭಾಗ ವೃತ್ತ,
4. ಅಮ್ಮಣ್ಣಿ ಕಾಲೇಜ್ ಎದುರು ಮಲ್ಲೇಶ್ವರಂ ವೃತ್ತ
5. ಮರಿಯಮ್ಮ ದೇವಸ್ಥಾನ ಎದುರು, ಶಿವಾಜಿನಗರ ವೃತ್ತ,
6. ಮೇಖ್ರಿ ಸರ್ಕಲ್ ಅಂಡರ್ ಪಾಸ್ ವೃತ್ತ

ಈ ಸಂಬಂಧ ಮೆ॥ಸ್ಪರ್ಶ್ ಆರ್ಥೋಪೆಡಿಕ್ ಆಸ್ಪತ್ರೆಯವರಿಗೆ ಮೇಲ್ಕಂಡ ಸ್ಥಳಗಳಲ್ಲಿ ಯಾವುದೇ ರೀತಿಯ ವಾಣಿಜ್ಯ ಜಾಹೀರಾತು ಫಲಕಗಳನ್ನು ಅಳವಡಿಸಲು ಅವಕಾಶ ನೀಡದೇ ಹಾಗೂ ಸದರಿ ಸ್ಥಳಗಳಲ್ಲಿ ಪಾಲಿಕೆಯ ಮತ್ತು ಮೆ॥ಸ್ಪರ್ಶ್ ಆರ್ಥೋಪೆಡಿಕ್ ಆಸ್ಪತ್ರೆಯ ಹೆಸರನ್ನು ಒಳಗೊಂಡ ನಾಮಫಲಕಗಳನ್ನು ಅಳವಡಿಸಿ ತಮ್ಮ ಸ್ವಂತ ವೆಚ್ಚದಲ್ಲಿ ಭೂ ವಿನ್ಯಾಸ ಮತ್ತು ಅಭಿವೃದ್ಧಿಪಡಿಸಲು ಐದು ವರ್ಷದ ಅವಧಿಗೆ ಅನುಮತಿ ನೀಡುವ ಸಂಬಂಧ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ಆಯುಕ್ತರ ದಿನಾಂಕ:13-11-2012 ರ ಟಿಪ್ಪಣಿ.

<u>ನಿರ್ಣಯ</u> :- **ಮಾನ್ಯ ಆಯುಕ್ತರವರ ದಿನಾಂಕ:13-11-2012ರ ಟಿಪ್ಪಣಿಯಲ್ಲಿ, ಸದರಿ ಉದ್ಯಾನವನಗಳನ್ನು ಈಗಾಗಲೇ ಪಾಲಿಕೆ ವತಿಯಿಂದ ನಿರ್ವಹಣೆ ಮಾಡುತ್ತಿರುವುದಾಗಿ ತಿಳಿಸಿರುವುದರಿಂದ, ಈ ಪ್ರಸ್ತಾವನೆಯನ್ನು ಸಧ್ಯಕ್ಕೆ ಕೈಬಿಡಲು ಸಮಿತಿಯು ತೀರ್ಮಾನಿಸಿತು..**

## 2. <u>ವಿಷಯದ ಸಂಖ್ಯೆ:ತೋ/ಸ್ಥಾ/ಸ/39/12-13, ದಿನಾಂಕ:08-01-2013</u>

ದಾಸರಹಳ್ಳಿ ವಲಯದ ದಾಸರಹಳ್ಳಿ ಕೆರೆಯ ಸಮಗ್ರ ಅಭಿವೃದ್ಧಿ ಹಂತ-**2ರ** ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು-5, ಕೆರೆಗಳುರವರು ಮೊದಲನೇ ಕರೆಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ವಿಧಾನದ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿರುತ್ತಾರೆ. ಗುತ್ತಿಗೆದಾರರಿಂದ ಏಕೈಕ ಟೆಂಡರ್ ಸ್ವೀಕೃತವಾಗಿದ್ದು, ಟೆಂಡರ್‌ದಾರರು ತಾಂತ್ರಿಕ ಬಿಡ್‌ನಲ್ಲಿ ಸಿಂಧುವಾಗಿರುತ್ತಾರೆ. ಕಾರ್ಯಪಾಲಕ ಅಭಿಯಂತರರು-5, ಕೆರೆಗಳು ರವರು ಏಕ ಟವೆಂಡರ್‌ದಾರರಾದ **ಶ್ರೀ.ಜೆ.ಸಿ.ಪ್ರಕಾಶ್, ಗುತ್ತಿಗೆದಾರರ** ಟೆಂಡರ್‌ನ್ನು ಅನುಮೋದನೆಗಾಗಿ ಸಲ್ಲಿಸಿರುತ್ತಾರೆ. ರೂ.300.00 ಲಕ್ಷಗಳ ಅಂದಾಜು ಪಟ್ಟಿಗೆ 2011-12ನೇ ಸಾಲಿನ ದರಪಟ್ಟಿಯ ಆಧಾರದ ಮೇಲೆ ಮುಖ್ಯ ಅಭಿಯಂತರರು, ಕೆರೆಗಳು ರವರು ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ನೀಡಿದ್ದು, ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ ರೂ.2,99,99,648.18 ಗಳಾಗಿದ್ದು, ಮಂಜೂರಾದ ದರಗಳಿಗೆ ಗುತ್ತಿಗೆದಾರರಾದ **ಶ್ರೀ.ಜೆ.ಸಿ.ಪ್ರಕಾಶ್**ರವರು, ಈ ಕಾಮಗಾರಿಗೆ ನಮೂದಿಸಿದ ಟೆಂಡರ್ ಮೊತ್ತವಾದ ರೂ.2,93,40,076.00 ಅನುಮೋದಿತ, 2011-12ನೇ ಸಾಲಿನ ಲೋಕೋಪಯೋಗಿ ಹಾಗೂ 2010-11ನೇ ಸಾಲಿನ ಸಣ್ಣ ನೀರಾವರಿ ಇಲಾಖೆಯ ದರಪಟ್ಟಿಗೆ ಹೋಲಿಸಿದಾಗ ಶೇಕಡಾ **2.20% ರಷ್ಟು ಕಡಿಮೆ** ಮತ್ತು 2012-13ನೇ ಸಾಲಿನ ಪ್ರಸ್ತುತ ಲೋಕೋಪಯೋಗಿ ಹಾಗೂ 2010-11ನೇ ಸಾಲಿನ ಸಣ್ಣ ನೀರಾವರಿ ಇಲಾಖೆಯ ದರಪಟ್ಟಿಗೆ ಹೋಲಿಸಿದಾಗ 4.31% ರಷ್ಟು ಕಡಿಮೆ ದರಗಳನ್ನು ನಮೂದಿಸಿದ್ದು, ಕನಿಷ್ಟ ಟೆಂಡರ್‌ದಾರರಾಗಿರುತ್ತಾರೆ. ಸದರಿ ಟೆಂಡರ್ ಅನ್ನು ಅನುಮೋದಿಸಲು ಮುಖ್ಯ ಅಭಯಂತರರು, ಕೆರೆಗಳು ರವರು ಶಿಫಾರಸ್ಸು ಮಾಡಿರುತ್ತಾರೆ.

ಮೇಲ್ಕಂಡ ಅಂಶಗಳನ್ನು ಗಮನಿಸಲಾಗಿ, ಟೆಂಡರ್‌ನ ಒಟ್ಟು ಮೊತ್ತವು(ಟೆಂಡರ್ ಪ್ರೀಮಿಯಂ ಸೇರಿ) ರೂ.2,93,40,076.00ಗಳಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ಯು.ಡಿ.ಡಿ./335/ ಎಮ್‌ಎನ್‌ವೈ/2007(ಭಾ), ದಿನಾಂಕ:11-05-2009 ರ ರೀತ್ಯಾ ಕರ್ನಾಟಕ ಮುನಿಸಿಪಲ್

ಮುಂದುವರೆದಿದೆ. . . . .

ಕಾರ್ಪೋರೇಷನ್ ಕಾಯ್ದೆ ನಿಯಮಗಳು 1977 ನಿಯಮ 6 ಕ್ಕೆ ಆರ್ಥಿಕ ಅಧಿಕಾರಗಳ ತಿದ್ದುಪಡಿಯ ಬಾಕಿ ಇಟ್ಟು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹೆಚ್ಚಿನ ಆರ್ಥಿಕ ಅಧಿಕಾರದ ಪ್ರತ್ಯಾಯೋಜನೆಯ ಶಿಫಾರಸ್ಸನ್ನು ಹಾಗೂ ಸರ್ಕಾರದ ಆದೇಶ ಸಂಖ್ಯೆ:ಯು.ಡಿ.ಡಿ/636/ ಎಂಎನ್‌ವೈ/2010, ಬೆಂಗಳೂರು, ದಿನಾಂಕ:02-04-2011ರ ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ ನಿಯಮಗಳು 1977 ನಿಯಮ 6 ಕ್ಕೆ ನೀಡಲಾದ ತಿದ್ದುಪಡಿಯನ್ನು ಸರ್ಕಾರವು ಅಂಗೀಕರಿಸಿದ್ದು, ಇದರಂತೆ ಟೆಂಡರ್ ಅಂಗೀಕರಿಸುವ ಪ್ರಾಧಿಕಾರವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಸಭೆಯ ವ್ಯಾಪ್ತಿಯಲ್ಲಿರುತ್ತದೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಟೆಂಡರ್ ಗುತ್ತಿಗೆದಾರರಾದ **ಶ್ರೀ.ಜೆ.ಪಿ.ಪ್ರಕಾಶ್** ರವರು 2011-12ನೇ ಸಾಲಿನ ಲೋಕೋಪಯೋಗಿ ಹಾಗೂ 2010-11ನೇ ಸಾಲಿನ ಸಣ್ಣ ನೀರಾವರಿ ಇಲಾಖೆಯ ದರಪಟ್ಟಿಯ ಮೇಲೆ ನಮೂದಿಸಿರುವ ದರಗಳಾದ ಶೇಕಡ 2.2%ರಷ್ಟು ಕಡಿಮೆ ದರಗಳು ಹಾಗೂ 2012-13ನೇ ಸಾಲಿನ ಪ್ರಸ್ತುತ ಲೋಕೋಪಯೋಗಿ ಹಾಗೂ 2010-11ನೇ ಸಾಲಿನ ಸಣ್ಣ ನೀರಾವರಿ ಇಲಾಖೆಯ ದರಪಟ್ಟಿಗೆ ಹೋಲಿಸಿದಾಗ **4.31% ರಷ್ಟು ಕಡಿಮೆ ದರಗಳು** ಅಥವಾ ರೂ.**2,93,40,076.00** (ಎರಡು ಕೋಟಿ, ತೊಂಭತ್ತಮೂರು ಲಕ್ಷದ, ನಲವತ್ತು ಸಾವಿರದ, ಎಪ್ಪತ್ತಾರು ರೂಪಾಯಿಗಳು ಮಾತ್ರ) ಗಳ ಟೆಂಡರ್‌ಗೆ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:06-01-2013 ರ ಟಿಪ್ಪಣಿ.

**<u>ನಿರ್ಣಯ:-</u> ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:06-01-2013ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

3. **<u>ವಿಷಯದ ಸಂಖ್ಯೆ:ತೋ/ಸ್ಥಾ/ಸ/42/12-13, ದಿನಾಂಕ:16-01-2013</u>**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ವಾರ್ಡ್ ಸಂಖ್ಯೆ.153, **ಮಾಧವನ್ ಉದ್ಯಾನವನ ಮತ್ತು ವೃತ್ತದ ನಿರ್ವಹಣೆಯನ್ನು M/S.CLOUD NINE** ಜಯನಗರ, ಬೆಂಗಳೂರುರವರು ದತ್ತು ಆಧಾರದಂತೆ ಅವರ ಖರ್ಚಿನಲ್ಲಿಯೇ ನಿರ್ವಹಿಸಲು ಒಪ್ಪಿ ಪತ್ರ ನೀಡಿರುತ್ತಾರೆ. ಈ ಬಗ್ಗೆ ಸಮಿತಿಯು ಮೂರು ವರ್ಷಗಳ ಅವಧಿಗೆ ದತ್ತು ನೀಡುವ ಬಗ್ಗೆ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:11-01-2013 ರ ಟಿಪ್ಪಣಿ.

**<u>ನಿರ್ಣಯ:-</u> ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:11-01-2013 ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

4. **<u>ವಿಷಯದ ಸಂಖ್ಯೆ:ತೋ/ಸ್ಥಾ/ಸ/43/12-13, ದಿನಾಂಕ:18-01-2013</u>**

ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ.145 ರಲ್ಲಿ **Improvements to Lakkasandra Quarry pit in ward No.145** ರ ಕಾಮಗಾರಿಗೆ ಲೆಕ್ಕ ಶೀರ್ಷಿಕೆ ಪಿ-1549 ರಲ್ಲಿ 2011-12ನೇ ಸಾಲಿನ ಅನುದಾನದಡಿಯಲ್ಲಿ ರೂ.234.00ಲಕ್ಷಗಳಿಗೆ ಜಾಬ್‌ಕೋಡ್ ನೀಡಲಾಗಿರುತ್ತದೆ.

ಮುಂದುವರೆದಿದೆ. . . . .

ವಾರ್ಡ್ ಸಂಖ್ಯೆ: 145ರಲ್ಲಿ **Improvements to Lakkasandra Quarry pit in ward No.145** ರ ಕಾಮಗಾರಿಗೆ ಮಂಜೂರಾಗಿದ್ದ ರೂ.234.00 ಲಕ್ಷಗಳನ್ನು ರೂ.150.00 ಲಕ್ಷಗಳಿಗೆ ಮಿತಿಗೊಳಿಸಿ ಪಾತ್‌ವೇ, ಬೆಂಚುಗಳು, ಶೌಚಾಲಯ ಅವಶ್ಯಕವಿರುವ ಕಡೆ ಕಾಂಪೌಂಡ್‌ನ್ನು ಮತ್ತು ಬೋರ್‌ವೆಲ್‌ನ್ನು ಹಾಕಿ ಆ ನೀರಿನಿಂದ ನೆಡಲಾಗಿರುವ ಸಸಿಗಳಿಗೆ, ನೀರು ಹಾಕುವ ಕೆಲಸ, ಗೇಟ್, ವಿದ್ಯುತ್ ಲ್ಯಾಂಪ್‌ಗಳನ್ನು ಅಳವಡಿಸಲು, ಸೆಕ್ಯೂರಿಟಿಯನ್ನು ಹಾಕಲು 2012-13ನೇ ಸಾಲಿನ ದರಪಟ್ಟಿಯನ್ನು ಅಳವಡಿಸಿ ಅಂದಾಜುಪಟ್ಟಿಯನ್ನು ರೂ.234.00 ಲಕ್ಷಗಳ ಬದಲಾಗಿ ರೂ.149.60 ಲಕ್ಷಗಳಿಗೆ ಮಿತಿಗೊಳಿಸಿ ಅಂದಾಜುಪಟ್ಟಿಯನ್ನು ತಯಾರಿಸಿ, ಸದರಿ ಕಾಮಗಾರಿಗೆ ಹೊಸ ಜಾಬ್ ಸಂಖ್ಯೆ, ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿ ಹಾಗೂ ಟೆಂಡರ್ ಕರೆಯಲು ಅನುಮೋದನೆ ಕೋರಿ, ಕಾರ್ಯಪಾಲಕ ಅಭಿಯಂತರರು (ಯೋಜನೆ – ದಕ್ಷಿಣ) ರವರು ಕಡತವನ್ನು ಮಂಡಿಸಿರುತ್ತಾರೆ.

| ಕ್ರ. ಸಂ. | ಕಾಮಗಾರಿ ವಿವರಗಳು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 1. | Improvements to Lakkasandra Quarry pit in ward No.145 | 149.60 |

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ 2012-13ನೇ ಸಾಲಿನ ದರಪಟ್ಟಿಯನ್ನು ಅಳವಡಿಸಿ ಅಂದಾಜುಪಟ್ಟಿಯನ್ನು **ರೂ.234.00** ಲಕ್ಷಗಳ ಬದಲಾಗಿ, **ರೂ.149.60** ಲಕ್ಷಗಳಿಗೆ ಮಿತಿಗೊಳಿಸಿ ಅಂದಾಜುಪಟ್ಟಿಯನ್ನು ತಯಾರಿಸಿ, ಸದರಿ ಕಾಮಗಾರಿಗೆ ಹೊಸ ಜಾಬ್ ಸಂಖ್ಯೆ ಮತ್ತು ಆಡಳಿತಾತ್ಮಕ ಮಂಜೂರಾತಿ ಹಾಗೂ ಟೆಂಡರ್ ಕರೆಯಲು ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ಆಯುಕ್ತರವರ ದಿನಾಂಕ:16-01-2013 ರ ಟಿಪ್ಪಣಿ.

**<u>ನಿರ್ಣಯ:-</u> ಮಾನ್ಯ ಆಯುಕ್ತರವರ ದಿನಾಂಕ:16-01-2013 ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

**5. <u>ವಿಷಯದ ಸಂಖ್ಯೆ:ತೋ/ಸ್ಥಾ/ಸ/44/12-13, ದಿನಾಂಕ:22-01-2013</u>**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ರಾಜರಾಜೇಶ್ವರಿನಗರ ವಲಯ ವ್ಯಾಪ್ತಿಯಲ್ಲಿ ಬರುವ ಉದ್ಯಾನವನಗಳ ಅಭಿವೃದ್ಧಿ ಮತ್ತು ಹೊಸದಾಗಿ ವೃಕ್ಷವನಗಳ ನಿರ್ಮಾಣ ಮಾಡಲು 2012-13ನೇ ಸಾಲಿನ ಆಯವ್ಯಯದಲ್ಲಿ ಉದ್ಯಾನವನಗಳ ಅಭಿವೃದ್ಧಿ ಮತ್ತು ಹೊಸದಾಗಿ ವೃಕ್ಷವನಗಳಿಗೆ ಕಾಯ್ದಿರಿಸಿರುವ ಅನುದಾನಕ್ಕೆ ಅನುಗುಣವಾಗಿ ದಿನಾಂಕ: 12-01-2012 ರಲ್ಲಿ ನಡೆದ ಸಮಿತಿ ಸಭೆಯ ತೀರ್ಮಾನದಂತೆ ಕಾರ್ಯಕ್ರಮ ಪಟ್ಟಿ (ಪಿ.ಓ.ಡಬ್ಲ್ಯೂ) ತಯಾರಿಸಿ ಅನುಮೋದನೆ ಪಡೆಯಲು ಉಲ್ಲೇಖ ಪತ್ರದಲ್ಲಿ ಮಾನ್ಯ ಆಯುಕ್ತರವರನ್ನು ಕೋರಿರುತ್ತಾರೆ.

ಅದರಂತೆ, ರಾಜರಾಜೇಶ್ವರಿನಗರ ವಲಯಕ್ಕೆ ಸಂಬಂಧಿಸಿದ ಪಾಲಿಕೆ ಸದಸ್ಯರೊಂದಿಗೆ ಚರ್ಚಿಸಿ ಪತ್ರ ಪಡೆಯಲಾಗಿದ್ದು, 2012-13ನೇ ಸಾಲಿನ ಆಯವ್ಯಯದ ತೋಟಗಾರಿಕೆ ಮತ್ತು ಪರಿಸರ ಅಭಿವೃದ್ಧಿ ಅಡಿಯಲ್ಲಿ ಬರುವ ***"ಉದ್ಯಾನವನಗಳ ಭೂವಿನ್ಯಾಸ ವೃತ್ತಗಳು***

ಮುಂದುವರೆದಿದೆ. . . . .

***ಮೀಡಿಯನ್‌ಗಳು ಮತ್ತು ಬುಲೇ ವಾರ್ಡ್‌ಗಳ ಅಭಿವೃದ್ಧಿ ಪಿ0311***" ಲೆಕ್ಕಶೀರ್ಷಿಕೆ ಅಡಿಯಲ್ಲಿ ಕಾರ್ಯಕ್ರಮ ಪಟ್ಟಿ ತಯಾರಿಸಲಾಗಿದ್ದು, ಒಟ್ಟು 35 ಕಾಮಗಾರಿಗಳನ್ನು ***ರೂ.500.00ಲಕ್ಷಗಳ*** ಮೊತ್ತದಲ್ಲಿ ಅನುಷ್ಟಾನಗೊಳಿಸಲು ಅನುಮೋದನೆ ನೀಡಲು ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ) ರವರ ದಿನಾಂಕ:20-01-2013 ರ ಟಿಪ್ಪಣಿ.

**<u>ನಿರ್ಣಯ</u>:- ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:20-01-2013 ರ ಟಿಪ್ಪಣಿಯನ್ನು ಭಾಗಶಃ ಒಪ್ಪುತ್ತಾ, ದಿನಾಂಕ:04-10-2012 ರಂದು ಸಮಿತಿಯ ನಿರ್ಣಯದಂತೆ ರೂ.300.00 ಲಕ್ಷಗಳಿಗೆ ಮಿತಿಗೊಳಿಸಿ ಜಾಬ್‌ಕೋಡ್ ನೀಡಲು ಸಮಿತಿಯು ತೀರ್ಮಾನಿಸಿತು.**

## 6. <u>ವಿಷಯ ಸಂಖ್ಯೆ:ತೋ/ಸ್ಥಾ/ಸ/45/12-13, ದಿನಾಂಕ:22-01-2013</u>

ಮಹಾಲಕ್ಷ್ಮೀಪುರಂ ವಿಧಾನಸಭಾ ಕ್ಷೇತ್ರಕ್ಕೆ ಸೇರಿದ ವಾರ್ಡ್ ಸಂಖ್ಯೆ.75ರ ಶಂಕರಮಠ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಉದ್ಯಾನವನಗಳನ್ನು 2011-12ನೇ ಸಾಲಿನ ಆಯವ್ಯಯ ಪಟ್ಟಿಯಲ್ಲಿ ಪಿ-0311 ರ ಅಡಿಯಲ್ಲಿ ರೂ.12.00 ಲಕ್ಷಗಳನ್ನು ಮೀಸಲಿರಿಸಲಾಗಿರುತ್ತದೆ. ಈ ಅನುದಾನದಲ್ಲಿ ಸದರಿ ಉದ್ಯಾನವನಗಳಲ್ಲಿ ಮರದ ಜಾತಿಯ ಗಿಡಗಳನ್ನು ನೆಟ್ಟು ಸುಂದರೀಕರಣಗೊಳಿಸುವ ಕೆಲಸಗಳನ್ನು ನಿರ್ವಹಿಸಲು ಅಂದಾಜುಪಟ್ಟಿಯನ್ನು ಪಾಲಿಕೆಯ ತೋಟಗಾರಿಕೆ ಇಲಾಖೆಯ ಅನುಮೋದಿತ ದರಗಳಂತೆ ಸಿದ್ದಪಡಿಸಲಾಗಿರುತ್ತದೆ. ಆದ್ದರಿಂದ, ಸದರಿ ಸುಂದರೀಕರಣ ಕೆಲಸಗಳನ್ನು ನಿರ್ವಹಿಸಲು ಆಡಳಿತಾತ್ಮಕ ಅನುಮೋದನೆ ಹಾಗೂ ಸಾರ್ವಜನಿಕರ ಕೆಲಸ ಕಾರ್ಯಗಳ ಹಿತದೃಷ್ಠಿಯಿಂದ, ಈ ಕೆಲಸಗಳನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆ, ಬೆಂಗಳೂರು ರವರ ಮುಖಾಂತರ ಕೈಗೆತ್ತಿಕೊಳ್ಳಲು ಅನುಮೋದನೆ ನೀಡಲು ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:18-01-2013 ರ ಟಿಪ್ಪಣಿ.

| ಕ್ರ. ಸಂ. | ಉದ್ಯಾನವನದ ಹೆಸರು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 1. | ವಾರ್ಡ್ ಸಂಖ್ಯೆ.75ರ ಪೈಪ್‌ಲೈನ್ ಭಾಗ-4, ಉದ್ಯಾನವನದಲ್ಲಿ ಮರದ ಜಾತಿಯ ಗಿಡಗಳನ್ನು ನೆಟ್ಟು ಸುಂದರೀಕರಣಗೊಳಿಸುವ ಬಗ್ಗೆ | 12.00 |
| | ಒಟ್ಟು ರೂ. | 12.00 |

**<u>ನಿರ್ಣಯ</u>:- ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:18-01-2013 ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

## 7. <u>ವಿಷಯ ಸಂಖ್ಯೆ:ತೋ/ಸ್ಥಾ/ಸ/46/12-13, ದಿನಾಂಕ:22-01-2013</u>

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿನ ಎಲ್ಲಾ 9 ತೋಟಗಾರಿಕಾ ಅಧೀಕ್ಷಕರ ವ್ಯಾಪ್ತಿಯಲ್ಲಿ ಬರುವ 937 ಉದ್ಯಾನವನಗಳ ನಿರ್ವಹಣೆಯನ್ನು 2009-10ನೇ ಸಾಲಿನಲ್ಲಿ ಟೆಂಡರ್ ಕರೆದು ಗುತ್ತಿಗೆದಾರರನ್ನು ನೇಮಿಸಲಾಗಿತ್ತು. ತದನಂತರ, 2010-11ನೇ ಸಾಲಿನ ಆಯವ್ಯಯದಲ್ಲಿ

ಮುಂದುವರೆದಿದೆ. . . . .

ಉದ್ಯಾನವನಗಳ ನಿರ್ವಹಣೆಗಾಗಿ ಅವಶ್ಯಕತೆ ಇದ್ದಷ್ಟು ಅನುದಾನವನ್ನು ಕಾಯ್ದಿರಿಸದೇ ಇದ್ದುದ್ದರಿಂದ, ಈ ಉದ್ಯಾನವನಗಳ ನಿರ್ವಹಣೆಯ ಅವಧಿಯನ್ನು ಹಿಂದಿನ ಗುತ್ತಿಗೆದಾರರಿಗೆ ಹಿಂದಿನ ಟೆಂಡರ್‌ನಲ್ಲಿದ್ದ ಷರತ್ತು ಮತ್ತು ನಿಭಂದನೆಗಳಂತೆ ಅವಧಿ ವಿಸ್ತರಣೆ ಮಾಡಿ ಆದೇಶವನ್ನು ಈ ಕಛೇರಿಯಿಂದ ನೀಡಲಾಯಿತು. ಆದರೆ, ದಕ್ಷಿಣ ವಲಯಕ್ಕೆ ಸಂಬಂಧಪಟ್ಟಂತೆ ನಿರ್ವಹಣೆಯ ಅವಧಿಯನ್ನು 2010–11ನೇ ಸಾಲಿಗೆ ಮಾತ್ರ ಅನುಮೋದನೆಗೊಂಡಿದ್ದು, 2011–12 ಹಾಗೂ 2012–13ನೇ ಸಾಲಿಗೆ ಆಯುಕ್ತರ ಅನುಮೋದನೆ ಪಡೆದಿರುವುದಿಲ್ಲ.

2011–12ನೇ ಸಾಲಿನಲ್ಲಿ ನಿರ್ವಹಣೆಗಾಗಿ ಆಯವ್ಯಯದಲ್ಲಿ ಹಣ ಕಾಯ್ದಿರಿಸಿದ್ದರೂ ಕಾರಣಾಂತರಗಳಿಂದ ಸಕಾಲದಲ್ಲಿ ಜಾಬ್‌ಕೋಡ್ ನೀಡಿಲ್ಲವಾದ್ದರಿಂದ, 2011–12ನೇ ಸಾಲಿನ ಕೆಲವು ತಿಂಗಳುಗಳ ಅವಧಿಗೆ ನಿರ್ವಹಣೆ ಗುತ್ತಿಗೆದಾರರ ಅವಧಿ ವಿಸ್ತರಣೆಯಾಗಿರುತ್ತದೆ. ಈ ಕಡತದಲ್ಲಿರುವ ತಃಖ್ತೆಯಲ್ಲಿ ನೀಡಿರುವ ವಿವರಗಳಂತೆ ಒಟ್ಟು 9 ವಲಯಗಳ ವ್ಯಾಪ್ತಿಯಲ್ಲಿ 937 ಸಂಖ್ಯೆಯ ಉದ್ಯಾನವನಗಳಿಗೆ ನಿರ್ವಹಣೆಗಾಗಿ ಅವಧಿ ವಿಸ್ತರಿಸಿರುವ ಅವಧಿಗಾಗಿ 2010–11ನೇ ಸಾಲಿಗೆ ರೂ.351.36 ಲಕ್ಷಗಳು, 2011–12ನೇ ಸಾಲಿಗೆ ರೂ.1,118.26 ಲಕ್ಷಗಳು ಹಾಗೂ 2012–13ನೇ ಸಾಲಿಗೆ ರೂ.632.50 ಲಕ್ಷಗಳು, ಒಟ್ಟು ರೂ.2,102.12 ಲಕ್ಷಗಳಿಗಾಗಿ ತಗಲುವ ಖರ್ಚನ್ನು ಸ್ಥಿರೀಕರಿಸಲು ತೋಟಗಾರಿಕೆ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಟಿಪ್ಪಣಿಯನ್ನು ಸಲ್ಲಿಸಲಾಗಿದೆ.

ನಿಯಮಕ್ಕೆ ವಿರುದ್ಧವಾಗಿ ವೆಚ್ಚ ಮಾಡಲು ಕಾರಣರಾದ ಅಧಿಕಾರಿಗಳ ವಿರುದ್ಧ ಕಾರಣ ಕೇಳಿ ಪತ್ರಗಳನ್ನು ನೀಡಲಾಗುತ್ತಿದೆ. ಅವರ ಉತ್ತರ ಬಂದ ಮೇಲೆ ಅವಶ್ಯಕವಿದ್ದಲ್ಲಿ ಅವರುಗಳ ವಿರುದ್ಧ ಇಲಾಖೆ ವಿಚಾರಣೆಯನ್ನು ಜರುಗಿಸಲಾಗುವುದು ಹಾಗೂ ಈ ಬಗ್ಗೆ ಕೈಗೊಂಡ ಕ್ರಮದ ವಿವರಗಳನ್ನು ಸಮಿತಿ ಮುಂದೆ ಮಂಡಿಸಲಾಗುವುದು ಹಾಗೂ ಮೇಲ್ಕಂಡ ಪ್ರಸ್ತಾವನೆಗೆ ಸ್ಥಿರೀಕರಣ ನೀಡಲು ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ **ಮಾನ್ಯ ಆಯುಕ್ತರವರ ದಿನಾಂಕ:17–01–2013** ರ ಟಿಪ್ಪಣಿ.

**ನಿರ್ಣಯ:–** **ಮಾನ್ಯ ಆಯುಕ್ತರವರ ದಿನಾಂಕ:17–01–2013 ರ ಟಿಪ್ಪಣಿಯಲ್ಲಿ ವಿಸ್ತರಿಸಿರುವ ಅವಧಿಗೆ ತಗಲುವ ವೆಚ್ಚವನ್ನು ಸ್ಥಿರೀಕರಣಕ್ಕೆ ಪಾಲಿಕೆಯ 198 ವಾರ್ಡ್‌ಗಳಲ್ಲಿ ಬರುವ 937 ಉದ್ಯಾನವನಗಳ ನಿರ್ವಹಣೆಯನ್ನು ದಿನಾಂಕ:31–03–2013ರವರೆಗೆ ಅಂತಿಮಗೊಳಿಸಿ ಸ್ಥಿರೀಕರಣಕ್ಕೆ ಸಮಿತಿಯು ಒಪ್ಪಿದೆ. ದಿನಾಂಕ:01–04–2013 ರಿಂದ ಎಲ್ಲಾ ಉದ್ಯಾನವನಗಳ ನಿರ್ವಹಣೆಯನ್ನು ಟೆಂಡರ್ ಪ್ರಕ್ರಿಯೆ ನಡೆಸಿ ನಿರ್ವಹಣೆ ಮಾಡಲು ಹಾಗೂ ಪೂರ್ವ ಮತ್ತು ದಕ್ಷಿಣ–1 ಮತ್ತು 2 ವಲಯಗಳ ಹಾಗೂ ಜೆ.ಪಿ. ಉದ್ಯಾನವನಗಳ ನಿರ್ವಹಣೆಗೆ ಜಾಬ್‌ಕೋಡ್ ದೊರೆಯದೇ ಇರುವ ಕಾರಣ, ಸದರಿ ವಲಯದ ಉದ್ಯಾನವನಗಳ ನಿರ್ವಹಣೆಯ ಅವಧಿಯನ್ನು ಮುಂದಿನ ಟೆಂಡರ್ ಕರೆಯುವವರೆಗೆ ಮುಂದುವರೆಸಲು ಸಮಿತಿಯು ಒಪ್ಪಿದೆ.**

### 8. ವಿಷಯದ ಸಂಖ್ಯೆ:ತೋ/ಸ್ಥಾ/ಸ/47/12–13, ದಿನಾಂಕ:22–01–2013

ತೋಟಗಾರಿಕೆ ಇಲಾಖೆ ದಕ್ಷಿಣ–1ರ ವ್ಯಾಪ್ತಿಯಲ್ಲಿ ಬರುವ (1) ಹೊಸೂರು ರೋಡ್ ಮಲ್ಲಿಗೆ ಹಾಸ್ಪಿಟಲ್ ಹತ್ತಿರ (2) ಅಶೋಕ ಪಿಲ್ಲರ್ (3) ಮಾಧವನ್ ಪಾರ್ಕ್ (4) ಬನಶಂಕರಿ ಸರ್ಕಲ್‌ಗಳನ್ನು ಹೂವಿನ ಕುಂಡಗಳು ಜೋಡಿಸಿ, ಹುಲ್ಲಿನ ಲಾನ್‌ಗಳನ್ನು ತಮ್ಮ ಸ್ವಂತ ಖರ್ಚಿನಲ್ಲಿ

ಮುಂದುವರೆದಿದೆ. . . . .

ಅಭಿವೃದ್ಧಿಪಡಿಸಿ ಶೃಂಗಾರಗೊಳಿಸಲು ಒಂದು ವರ್ಷ ಅನುಮತಿ ಹಾಗೂ ನಿರಾಕ್ಷೇಪಣಾ ಪತ್ರಗಳನ್ನು ನೀಡಲು H.M.CONSTRUCTIONS, BANGALORE ರವರು ಕೋರಿರುತ್ತಾರೆ.

ಮೇಲೆ ತಿಳಿಸಿರುವ ಸರ್ಕಲ್‌ಗಳನ್ನು ಅಭಿವೃದ್ಧಿಪಡಿಸಿ ಒಂದು ವರ್ಷಕ್ಕೆ ತಮ್ಮ ಸ್ವಂತ ಖರ್ಚಿನಲ್ಲಿ ಅಭಿವೃದ್ಧಿ ಹಾಗೂ ನಿರ್ವಹಣೆ ಮಾಡಲು ಅನುಮತಿಯನ್ನು ಹಾಗೂ ನಿರಾಕ್ಷೇಪಣಾ ಪತ್ರವನ್ನು ನೀಡುವ ಬಗ್ಗೆ ಅನುಮೋದನೆ ಕೋರಿ, ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:20–01–2013 ರ ಟಿಪ್ಪಣಿ.

**ನಿರ್ಣಯ:– ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:20–01–2013 ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

**9. ವಿಷಯದ ಸಂಖ್ಯೆ:ತೋ/ಸ್ಥಾ/ಸ/48/12–13, ದಿನಾಂಕ:22–01–2013**

ಮಹಾಲಕ್ಷ್ಮೀಪುರಂ ವಿಧಾನಸಭಾ ಕ್ಷೇತ್ರಕ್ಕೆ ಸೇರಿದ ವಾರ್ಡ್ ಸಂಖ್ಯೆ.75ರ ಶಂಕರಮಠ ವ್ಯಾಪ್ತಿಯಲ್ಲಿ ಬರುವ, ಈ ಕೆಳಕಂಡ ಉದ್ಯಾನವನಗಳನ್ನು 2012–13ನೇ ಸಾಲಿನ ಆಯವ್ಯಯ ಪಟ್ಟಿಯಲ್ಲಿ ಪಿ–0088 ರ ಅಡಿಯಲ್ಲಿ ರೂ.99.00 ಲಕ್ಷಗಳನ್ನು ಮೀಸಲಿರಿಸಲಾಗಿರುತ್ತದೆ. ಇದರಲ್ಲಿ ರೂ.42.00 ಲಕ್ಷಗಳನ್ನು ಸದರಿ ಉದ್ಯಾನವನಗಳಲ್ಲಿ ಮರದ ಜಾತಿಯ ಗಿಡಗಳನ್ನು ನೆಟ್ಟು ಸುಂದರೀಕರಣಗೊಳಿಸುವ ಕೆಲಸಗಳನ್ನು ನಿರ್ವಹಿಸಲು ಅಂದಾಜುಪಟ್ಟಿಯನ್ನು ಪಾಲಿಕೆಯ ತೋಟಗಾರಿಕೆ ಇಲಾಖೆಯ ಅನುಮೋದಿತ ದರಗಳಂತೆ ಸಿದ್ದಪಡಿಸಲಾಗಿರುತ್ತದೆ. ಆದ್ದರಿಂದ, ಸದರಿ ಸುಂದರೀಕರಣ ಕೆಲಸಗಳನ್ನು ನಿರ್ವಹಿಸಲು ಆಡಳಿತಾತ್ಮಕ ಅನುಮೋದನೆಗೆ ಜಾಬ್ ಸಂಖ್ಯೆ ನೀಡಲು ಹಾಗೂ ಸಾರ್ವಜನಿಕರ ಕೆಲಸ ಕಾರ್ಯಗಳ ಹಿತದೃಷ್ಠಿಯಿಂದ, ಈ ಕೆಲಸಗಳನ್ನು ಟೆಂಡರ್ ಪ್ರಕ್ರಿಯೆ ಮುಖಾಂತರ ಅನುಷ್ಟಾನಗೊಳಿಸಲು ಅನುಮೋದನೆ ನೀಡಲು ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ಅಪರ ಆಯುಕ್ತರು(ಯೋಜನೆ)ರವರ ದಿನಾಂಕ: 20–01–2013 ರ ಟಿಪ್ಪಣಿ.

| ಕ್ರ. ಸಂ. | ಉದ್ಯಾನವನದ ಹೆಸರು | ಅಂದಾಜು ಮೊತ್ತ |
|---|---|---|
| 1. | ವಾರ್ಡ್ ಸಂಖ್ಯೆ.75, ಉದ್ಯಾನವನದಲ್ಲಿ ಮರದ ಜಾತಿಯ ಗಿಡಗಳನ್ನು ನೆಟ್ಟು ಸುಂದರೀಕರಣಗೊಳಿಸುವ ಬಗ್ಗೆ | 2,65,000.00 |
| 2. | ವಾರ್ಡ್ ಸಂಖ್ಯೆ.75ರ ವ್ಯಾಪ್ತಿಯಲ್ಲಿ ಬರುವ, ಉದಯರವಿ ಉದ್ಯಾನವನದಲ್ಲಿ ಮರದ ಜಾತಿಯ ಗಿಡಗಳನ್ನು ನೆಟ್ಟು ಸುಂದರೀಕರಣಗೊಳಿಸುವ ಬಗ್ಗೆ | 4,21,000.00 |
| 3. | ವಾರ್ಡ್ ಸಂಖ್ಯೆ.75ರ ವ್ಯಾಪ್ತಿಯಲ್ಲಿ ಬರುವ, ಕೆಂಪೇಗೌಡ ಉದ್ಯಾನವನದಲ್ಲಿ ಮರದ ಜಾತಿಯ ಗಿಡಗಳನ್ನು ನೆಟ್ಟು ಸುಂದರೀಕರಣಗೊಳಿಸುವ ಬಗ್ಗೆ | 11,85,000.00 |
| 4. | ವಾರ್ಡ್ ಸಂಖ್ಯೆ.75ರ ವ್ಯಾಪ್ತಿಯಲ್ಲಿ ಬರುವ, ಶಾಂಭವಮೂರ್ತಿ ಉದ್ಯಾನವನದಲ್ಲಿ ಮರದ ಜಾತಿಯ ಗಿಡಗಳನ್ನು ನೆಟ್ಟು ಸುಂದರೀಕರಣಗೊಳಿಸುವ ಬಗ್ಗೆ | 4,00,000.00 |

ಮುಂದುವರೆದಿದೆ. . . . .

| | | |
|---|---|---|
| 5. | ವಾರ್ಡ್ ಸಂಖ್ಯೆ.75ರ ವ್ಯಾಪ್ತಿಯಲ್ಲಿ ಬರುವ, ಪೈಪ್ ಲೈನ್ ಭಾಗ-7 & 8 ರ ಉದ್ಯಾನವನದಲ್ಲಿ ಮರದ ಜಾತಿಯ ಗಿಡಗಳನ್ನು ನೆಟ್ಟು ಸುಂದರೀಕರಣಗೊಳಿಸುವ ಬಗ್ಗೆ | 6,00,000.00 |
| 6. | ವಾರ್ಡ್ ಸಂಖ್ಯೆ.75ರ ವ್ಯಾಪ್ತಿಯಲ್ಲಿ ಬರುವ, ಸಂತಸಿದ್ಧಾರೂಢ ಉದ್ಯಾನವನದಲ್ಲಿ ಮರದ ಜಾತಿಯ ಗಿಡಗಳನ್ನು ನೆಟ್ಟು ಸುಂದರೀಕರಣಗೊಳಿಸುವ ಬಗ್ಗೆ | 7,17,000.00 |
| 7. | ವಾರ್ಡ್ ಸಂಖ್ಯೆ.75ರ ವ್ಯಾಪ್ತಿಯಲ್ಲಿ ಬರುವ, ಜೈ ಮಾರುತಿ ಉದ್ಯಾನವನದಲ್ಲಿ ಮರದ ಜಾತಿಯ ಗಿಡಗಳನ್ನು ನೆಟ್ಟು ಸುಂದರೀಕರಣಗೊಳಿಸುವ ಬಗ್ಗೆ | 3,00,000.00 |
| 8. | ವಾರ್ಡ್ ಸಂಖ್ಯೆ.75ರ ವ್ಯಾಪ್ತಿಯಲ್ಲಿ ಬರುವ, ಎಸ್.ಸಿ.ಕೆ.ಬಡಾವಣೆ ಉದ್ಯಾನವನದಲ್ಲಿ ಮರದ ಜಾತಿಯ ಗಿಡಗಳನ್ನು ನೆಟ್ಟು ಸುಂದರೀಕರಣಗೊಳಿಸುವ ಬಗ್ಗೆ | 3,12,000.00 |
| | **ಒಟ್ಟು** | **42,00,000.00** |

<u>**ನಿರ್ಣಯ:-**</u> **ಮಾನ್ಯ ಅಪರ ಆಯುಕ್ತರು(ಯೋಜನೆ)ರವರ ದಿನಾಂಕ:20-01-2013 ರ ಟಿಪ್ಪಣಿಯನ್ನು ಒಪ್ಪುತ್ತಾ, ಸದರಿ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ ಕೆ.ಆರ್.ಐ.ಡಿ.ಎಲ್.ಸಂಸ್ಥೆ ಮುಖೇನ ಕೈಗೊಳ್ಳಲು ಸಮಿತಿಯು ತೀರ್ಮಾನಿಸಿತು.**

**10. <u>ವಿಷಯದ ಸಂಖ್ಯೆ:ತೋ/ಸ್ಥಾ/ಸ/49/12-13, ದಿನಾಂಕ:24-01-2013</u>**

ರಾಜರಾಜೇಶ್ವರಿನಗರ ವಲಯ ವ್ಯಾಪ್ತಿಯ ವಾರ್ಡ್ ನಂ.159 ಮತ್ತು 130 ರ ವ್ಯಾಪ್ತಿಯಲ್ಲಿ ಬರುವ ಉದ್ಯಾನವನಗಳನ್ನು ಅಭಿವೃದ್ಧಿಪಡಿಸಲು ತೋಟಗಾರಿಕೆ ಸ್ಥಾಯಿ ಸಮಿತಿಯ ದಿನಾಂಕ:04-10-2012ರ ನಿರ್ಣಯದಲ್ಲಿರುವಂತೆ, 2012-13ನೇ ಸಾಲಿನ ಆಯವ್ಯಯದಲ್ಲಿ ಉಳಿಕೆ ರೂ.1200.00 ಲಕ್ಷಗಳನ್ನು ತೋಟಗಾರಿಕಾ ಸ್ಥಾಯಿ ಸಮಿತಿ ಸದಸ್ಯರುಗಳ ವಾರ್ಡ್‌ಗಳಲ್ಲಿ ಉದ್ಯಾನವನಗಳನ್ನು ಅಭಿವೃದ್ಧಿಪಡಿಸಲು ಅನುದಾನ ಕಾಯ್ದಿರಿಸಿ ಕಾಮಗಾರಿಯನ್ನು ಕೈಗೊಳ್ಳುವಂತೆ ನಿರ್ಣಯ ಕೈಗೊಂಡಿರುತ್ತಾರೆ.

| **ಕ್ರ. ಸಂ.** | **ಉದ್ಯಾನವನದ ವಿವರ** | **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)** |
|---|---|---|
| 1. | Providing Borewell and Repairs to pathway and fixing at K.S.Town park No.2, ward No.159 RRNagara Zone. | **15.00** |
| 2. | Providing Borewell and Repairs to pathway and fixing at K.S.Town park No.4, ward No.159 RRNagara Zone. | **15.00** |
| 3. | Providing Chainlink fencing to proposed park at IBO Layout in ward No.130 RRNagara Zone. | **16.00** |

ಅದರಂತೆ, ರಾಜರಾಜೇಶ್ವರಿನಗರ ವಲಯ, ವಾರ್ಡ್ ಸಂಖ್ಯೆ.159 ಹಾಗೂ 130ರ ಉದ್ಯಾನವನಗಳಿಗೆ ಕೊಳವೆ ಬಾವಿ, ತಂತಿಬೇಲಿ, ನಡೆದಾರಿ ದುರಸ್ಥಿಪಡಿಸಲು 2012-13ನೇ ಸಾಲಿನ

ಮುಂದುವರೆದಿದೆ. . . . .

ಆಯವ್ಯಯದ ತೋಟಗಾರಿಕೆ ಮತ್ತು ಪರಿಸರ ಅಭಿವೃದ್ಧಿ ಅಡಿಯಲ್ಲಿ ಬರುವ ***"ಕೊಳವೆ ಬಾವಿಗಳನ್ನು ಕೊರೆದು ಮತ್ತು ನಿರ್ವಹಣೆ, ಪಂಪ್‌ಸೆಟ್‌ಗಳು ಮತ್ತು ಪೈಪ್‌ಲೈನ್‌ಗಳ ನಿರ್ಮಾಣ ಪಿ.ಓ.–299"*** ಲೆಕ್ಕಶೀರ್ಷಿಕೆಯಲ್ಲಿ ಮೇಲ್ಕಂಡಂತೆ ಒಟ್ಟು 03, ಕಾಮಗಾರಿಗಳನ್ನು **ರೂ.46.00 ಲಕ್ಷಗಳ** ಮೊತ್ತದಲ್ಲಿ ಅನುಷ್ಠಾನಗೊಳಿಸಲು, ಜಾಬ್ ಕೋಡ್ ನೀಡಲು ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ) ರವರ ದಿನಾಂಕ: 21–01–2013 ರ ಟಿಪ್ಪಣಿ.

**<u>ನಿರ್ಣಯ:</u>– ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:21–01–2013 ರ ಟಿಪ್ಪಣಿಯನ್ನು ಒಪ್ಪುತ್ತಾ, ಸದರಿ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ ಕೆ.ಆರ್.ಐ.ಡಿ.ಎಲ್.ಸಂಸ್ಥೆ ಮುಖೇನ ಕೈಗೊಳ್ಳಲು ಸಮಿತಿಯು ತೀರ್ಮಾನಿಸಿತು.**

## 11. <u>ವಿಷಯ ಸಂಖ್ಯೆ:ತೋ/ಸ್ಥಾ/ಸ/50/12–13, ದಿನಾಂಕ:29–01–2013</u>

ಜಯನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಾರ್ಡ್ ಸಂಖ್ಯೆ.177 ರ ವ್ಯಾಪ್ತಿಯಲ್ಲಿ, ಈ ಕೆಳಕಂಡ ಕಾಮಗಾರಿಗಳನ್ನು 2012–13ನೇ ಸಾಲಿನ ಆಯವ್ಯಯದಲ್ಲಿ ತೋಟಗಾರಿಕೆ ಸ್ಥಾಯಿ ಸಮಿತಿಯ ಸದಸ್ಯರ ವಾರ್ಡ್‌ಗಳಿಗೆ ಕಾಯ್ದಿರಿಸಿರುವ ಅನುದಾನದಲ್ಲಿ ವಾರ್ಡ್ ಸಂಖ್ಯೆ.177ರ ವ್ಯಾಪ್ತಿಗೆ ರೂ.95.00 ಲಕ್ಷಗಳಿಗೆ ಮಾನ್ಯ ಆಯುಕ್ತರವರು ಅನುಮೋದನೆಯನ್ನು ನೀಡಿರುತ್ತಾರೆ. ಅದರಂತೆ, 2009–10ನೇ ಸಾಲಿನ ತೋಟಗಾರಿಕೆ ಇಲಾಖೆಯ ದರಪಟ್ಟಿಯ ದರಗಳಿಗೆ ಅಂದಾಜು ಪಟ್ಟಿಗಳನ್ನು ತಯಾರಿಸಿದ್ದು, ಸದರಿ ಅಂದಾಜು ಪಟ್ಟಿಗಳಿಗೆ ಜಾಬ್ ಸಂಖ್ಯೆ. ಆಡಳಿತಾತ್ಮಕ ಅನುಮೋದನೆ ಹಾಗೂ ಸದರಿ ಕಾಮಗಾರಿಗಳನ್ನು ಕರ್ನಾಟಕ ಸರ್ಕಾರಿ ಸ್ವಾಮ್ಯದ ಕೆ.ಆರ್.ಐ.ಡಿ.ಎಲ್.ಸಂಸ್ಥೆರವರ ಮುಖಾಂತರ ನಿರ್ವಹಿಸಲು ಅನುಮೋದನೆ ಕೋರಿ ತೋಟಗಾರಿಕೆ ಅಧೀಕ್ಷಕರು (ದಕ್ಷಿಣ–2)ರವರು ಕಡತವನ್ನು ಸಲ್ಲಿಸಿರುತ್ತಾರೆ.

| ಕ್ರ. ಸಂ. | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 1. | ಜೆ.ಪಿ.ನಗರ 3ನೇ ಹಂತ, 3 ಮತ್ತು 5ನೇ ಅಡ್ಡರಸ್ತೆಯ ಭಾಗದಲ್ಲಿರುವ ಮಿನಿ ಫಾರೆಸ್ಟ್– ಭಾಗ–3 ಉದ್ಯಾನವನ ಅಭಿವೃದ್ಧಿ ಕಾಮಗಾರಿ. | 13.00 |
| 2. | ಜೆ.ಪಿ.ನಗರ 3ನೇ ಹಂತ, 4 ಮತ್ತು 9ನೇ ಅಡ್ಡರಸ್ತೆಯ ಭಾಗದಲ್ಲಿರುವ ಮಿನಿ ಫಾರೆಸ್ಟ್– ಭಾಗ–2 ಉದ್ಯಾನವನ ಅಭಿವೃದ್ಧಿ ಕಾಮಗಾರಿ. | 8.00 |
| 3. | ಜೆ.ಪಿ.ನಗರ 3ನೇ ಹಂತ, 46 ಮತ್ತು 3ನೇ ಅಡ್ಡರಸ್ತೆಯ ಭಾಗದಲ್ಲಿರುವ ಮಿನಿ ಫಾರೆಸ್ಟ್– ಭಾಗ–4 ಉದ್ಯಾನವನ ಅಭಿವೃದ್ಧಿ ಕಾಮಗಾರಿ. | 13.00 |
| 4. | ಕೆ.ಎಸ್.ಆರ್.ಟಿ.ಸಿ. ಬಡಾವಣೆ ಉದ್ಯಾನವನ ಹಾಗೂ ಬಿ.ಡಬ್ಲ್ಯೂ.ಎಸ್.ಎಸ್.ಬಿ ಕಛೇರಿ ಮುಂಭಾಗದ ಉದ್ಯಾನವನ. | 5.00 |
| 5. | ಜೆ.ಪಿ.ನಗರ 3ನೇ ಹಂತ, ಮಿನಿ ಫಾರೆಸ್ಟ್– ಭಾಗ–2, 3 ಮತ್ತು 4ಕ್ಕೆ ಬೋರ್‌ವೆಲ್ ಕೊರೆಯುವುದು ಹಾಗೂ ಪೈಪ್‌ಗಳ ಅಳವಡಿಕೆ ಕಾಮಗಾರಿ. | 11.00 |

ಮುಂದುವರೆದಿದೆ. . . . .

| | | |
|---|---|---|
| 6. | 21ನೇ ಮುಖ್ಯರಸ್ತೆ, ಮಾರೇನಹಳ್ಳಿ, ಜೆ.ಪಿ.ನಗರದ 2ನೇ ಹಂತ, ಅಭಿವೃದ್ಧಿಪಡಿಸುತ್ತಿರುವ ಉದ್ಯಾನವನಕ್ಕೆ ವಾಚ್‌ಮೆನ್ ಶೆಡ್ ಹಾಗೂ ಶೌಚಾಲಯ ನಿರ್ಮಾಣದ ಕಾಮಗಾರಿ. | 10.00 |
| 7. | 21ನೇ ಮುಖ್ಯರಸ್ತೆ, ಮಾರೇನಹಳ್ಳಿ, ಜೆ.ಪಿ.ನಗರದ 2ನೇ ಹಂತ, ಅಭಿವೃದ್ಧಿಪಡಿಸುತ್ತಿರುವ ಉದ್ಯಾನವನಕ್ಕೆ ಕಾಂಪೌಂಡ್ ಹಾಗೂ ಶೌಚಾಲಯ ನಿರ್ಮಾಣದ ಕಾಮಗಾರಿ. | 5.00 |
| 8. | 21ನೇ ಮುಖ್ಯರಸ್ತೆ, ಮಾರೇನಹಳ್ಳಿ, ಜೆ.ಪಿ.ನಗರದ 2ನೇ ಹಂತ, ಅಭಿವೃದ್ಧಿಪಡಿಸುತ್ತಿರುವ ಉದ್ಯಾನವನಕ್ಕೆ ದೀಪಗಳ ಅಳವಡಿಕೆ ಕಾಮಗಾರಿ. | 10.00 |
| 9. | ಜೆ.ಪಿ.ನಗರ 4ನೇ ಹಂತ, ಡಾಲರ್ಸ್ ಕಾಲೋನಿ, ಉದ್ಯಾನವನ ಮತ್ತು ಆಟದ ಮೈದಾನಕ್ಕೆ ದೀಪಗಳ ಅಳವಡಿಕೆ ಕಾಮಗಾರಿ. | 10.00 |
| 10. | ಜೆ.ಪಿ.ನಗರ ಮಿನಿ ಫಾರೆಸ್ಟ್ ಉದ್ಯಾನವನ ಭಾಗ–2ಕ್ಕೆ ದೀಪಗಳ ಅಳವಡಿಕೆ ಕಾಮಗಾರಿ. | 10.00 |
| | **ಒಟ್ಟು ಮೊತ್ತ** | **95.00** |

ತೋಟಗಾರಿಕೆ ಅಧೀಕ್ಷಕರು (ದಕ್ಷಿಣ–2) ವಿಭಾಗರವರು ಸಲ್ಲಿಸಿರುವ ಪ್ರಸ್ತಾವನೆಯಂತೆ, ಮೇಲ್ಕಂಡ ಕಾಮಗಾರಿಗಳಿಗೆ ಜಾಬ್ ಸಂಖ್ಯೆ, ಆಡಳಿತಾತ್ಮಕ ಅನುಮೋದನೆ ಮತ್ತು ನಿಯಮಾನುಸಾರ ಟೆಂಡರ್ ಪ್ರಕ್ರಿಯೆ ನಡೆಸಿ ನಿರ್ವಹಿಸಲು ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ: 24–01–2013 ರ ಟಿಪ್ಪಣಿ.

<u>ನಿರ್ಣಯ:–</u> **ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:24–01–2013 ರ ಟಿಪ್ಪಣಿಯನ್ನು ಒಪ್ಪುತ್ತಾ, ಸದರಿ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ ಕೆ.ಆರ್.ಐ.ಡಿ.ಎಲ್.ಸಂಸ್ಥೆ ಮುಖೇನ ಕೈಗೊಳ್ಳಲು ಸಮಿತಿಯು ತೀರ್ಮಾನಿಸಿತು.**

**12. <u>ವಿಷಯದ ಸಂಖ್ಯೆ:ತೋ/ಸ್ಥಾ/ಸ/51/12–13, ದಿನಾಂಕ:29–01–2013</u>**

ಮೇಲ್ಕಂಡ ವಿಷಯಕ್ಕೆ ಸಂಬಂಧಪಟ್ಟಂತೆ, ಪೂರ್ವ ವಲಯ, ವಾರ್ಡ್ ನಂ.114ರ ವ್ಯಾಪ್ತಿಯಲ್ಲಿ ಉದ್ಯಾನವನಗಳನ್ನು ಅಭಿವೃದ್ಧಿಪಡಿಸಲು ತೋಟಗಾರಿಕೆ ಸ್ಥಾಯಿ ಸಮಿತಿಯ ನಿರ್ಣಯದಲ್ಲಿ ಇರುವಂತೆ, 2012–13ನೇ ಸಾಲಿನ ಆಯವ್ಯಯದಲ್ಲಿ ಉಳಿಕೆ ರೂ.1200.00 ಲಕ್ಷಗಳನ್ನು ತೋಟಗಾರಿಕೆ ಸ್ಥಾಯಿ ಸಮಿತಿಯ ಸದಸ್ಯರುಗಳ ವಾರ್ಡ್‌ಗಳಲ್ಲಿ ಉದ್ಯಾನವನವನ್ನು ಅಭಿವೃದ್ಧಿಪಡಿಸಲು ಅನುದಾನ ಕಾಯ್ದಿರಿಸಿ ಕಾಮಗಾರಿ ಕೈಗೊಳ್ಳುವಂತೆ ನಿರ್ಣಯ ಕೈಗೊಂಡಿರುತ್ತಾರೆ.

ಅದರಂತೆ, ಪೂರ್ವ ವಲಯದ ವಾರ್ಡ್ ನಂ.114ರ ವ್ಯಾಪ್ತಿಯಲ್ಲಿ ಬರುವ ಉದ್ಯಾನವನಗಳಿಗೆ ಚೈನ್‌ಲಿಂಕ್, ತಂತಿಬೇಲಿ, ನಡುದಾರಿ, ಮಕ್ಕಳ ಆಟದ ಸಾಮಗ್ರಿ, ಕೊಳವೆಬಾವಿ ಕೊರೆಯುವ ಕಾಮಗಾರಿಗಳಿಗೆ 2012–13ನೇ ಸಾಲಿನ ಆಯವ್ಯಯದ ತೋಟಗಾರಿಕೆ ಮತ್ತು ಪರಿಸರ ಅಭಿವೃದ್ಧಿ ಅಡಿಯಲ್ಲಿ ಬರುವ ಪಿಓ–299, ಪಿಓ–088 ಲೆಕ್ಕಶೀರ್ಷಿಕೆಯಡಿಯಲ್ಲಿ ಕಾಮಗಾರಿಯನ್ನು ಕೈಗೊಳ್ಳಲು

ಮುಂದುವರೆದಿದೆ. . . . .

**ರೂ.95.00ಲಕ್ಷಗಳ** ಮೊತ್ತದಲ್ಲಿ ಅನುಷ್ಠಾನಗೊಳಿಸಲು ಅನುಮತಿ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:**24-01-2013** ರ ಟಿಪ್ಪಣಿ.

**<u>ನಿರ್ಣಯ:</u>- ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ: 24-01-2013 ರ ಟಿಪ್ಪಣಿಯನ್ನು ಒಪ್ಪುತ್ತಾ, ಸದರಿ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ ಕೆ.ಆರ್.ಐ.ಡಿ.ಎಲ್.ಸಂಸ್ಥೆ ಮುಖೇನ ಕೈಗೊಳ್ಳಲು ಸಮಿತಿಯು ತೀರ್ಮಾನಿಸಿತು.**

**13. <u>ವಿಷಯದ ಸಂಖ್ಯೆ:ತೋ/ಸ್ಥಾ/ಸ/52/12-13, ದಿನಾಂಕ:29-01-2013</u>**

ಮಹಾಲಕ್ಷ್ಮಿಪುರಂ ವಿಧಾನ ಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ-44ರ ಮಾರಪ್ಪನಪಾಳ್ಯ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಉದ್ಯಾನವನಗಳ ಅಭಿವೃದ್ಧಿ ಕಾಮಗಾರಿಗಾಗಿ 2012-13ರ ಲೋಕೋಪಯೋಗಿ ಇಲಾಖೆಯ ದರಪಟ್ಟಿ ಹಾಗೂ ಅನುಮೋದಿತ ದರಪಟ್ಟಿ ಅನ್ವಯ ರೂ.94.96 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು, ಸದರಿ ಕಾಮಗಾರಿಗಳಿಗೆ 2012-13ನೇ ಸಾಲಿನ ಆಯವ್ಯಯದಲ್ಲಿ ವಾರ್ಡ್ ಸದಸ್ಯರ ಅನುದಾನದಡಿಯಲ್ಲಿ ರೂ.95.00 ಲಕ್ಷಗಳನ್ನು (ಪಿ-0311) ಮೀಸಲಿರಿಸಲಾಗಿರುತ್ತದೆ. ತೋಟಗಾರಿಕೆ ಸ್ಥಾಯಿ ಸಮಿತಿಯ ದಿನಾಂಕ:04-10-2012ರ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದ ವಿಷಯ ಸಂಖ್ಯೆ:ತೋ/ಸ್ಥಾ/ಸ/23/2012-13, ದಿನಾಂಕ: 04-10-2012 ರಲ್ಲಿ ಸದರಿ ಕಾಮಗಾರಿಗಳಿಗೆ ಟೆಂಡರ್ ಕರೆದು ಟೆಂಡರ್ ಪ್ರಕ್ರಿಯೆ ನಡೆಸುವ ಹಂತದಲ್ಲಿ ತುಂಬಾ ವಿಳಂಬವಾಗುವ ಪ್ರಯುಕ್ತ ಸದಸ್ಯರ ಅನುದಾನವನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ವಹಿಸಿ ಕಾಮಗಾರಿಗಳನ್ನು ಕೈಗೊಳ್ಳಲು ಸಮಿತಿಯು ತೀರ್ಮಾನಿಸಲಾಗಿರುತ್ತದೆ.

ಆದ್ದರಿಂದ, ಸದರಿ ಕಾಮಗಾರಿಗಳಿಗೆ ತೋಟಗಾರಿಕೆ ಸ್ಥಾಯಿ ಸಮಿತಿಯ ನಿರ್ಣಯದಲ್ಲಿ ತಿಳಿಸಿರುವಂತೆ, ವಾರ್ಡ್ ಸದಸ್ಯರ ಅನುದಾನವನ್ನು ನಿಯಮಾನುಸಾರ ಟೆಂಡರ್ ಪ್ರಕ್ರಿಯ ಮುಖಾಂತರ ಕಾಮಗಾರಿಗಳನ್ನು ಕೈಗೊಳ್ಳಲು ತೀರ್ಮಾನಿಸಿರುವುದರಿಂದ, ಈ ಕೆಳಕಂಡ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಜಾಬ್ ಕೋಡ್ ನೀಡಲು ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:**26-01-2013** ರ ಟಿಪ್ಪಣಿ.

| Sl. No. | Name of Work | Est.Cost (Rs. In Lakshs) |
|---|---|---|
| 1. | Providing and fixing Gazebo and benches to Ganapathi Temple Park at Shankarnagar in Ward No.44. | 5.00 |
| 2. | Providing New Borewell to Shankarnagar Park, Part-2 in Ward No.44 | 5.00 |
| 3. | Providing Pathway Fencing and other development works in Ashokpura park in Ward No.44 | 8.00 |
| 4. | Providing pathway and other development works in Vijayanandanagar at Ramamandira park in Ward No.44 | 8.00 |

ಮುಂದುವರೆದಿದೆ. . . . .

| | | |
|---|---|---|
| 5. | Providing pathway and Gazebo in Triangular park at Shankarnagar in Ward No.44 | 6.50 |
| 6. | Providing and fixing platform to Benches and Gazebo repairs in Shankarnagar park part -1 in Ward No.44 | 9.00 |
| 7. | Providing Platform to Benches and Shankarnagar park 1 and 2 in Ward No.44 | 19.98 |
| 8. | Providing widening of pathway to Shankarnagar park part-2 in Ward No.44 | 19.98 |
| 9. | Providing fixing, fencing and painting to Fajiv Gandhinagar park in Ward No.44 | 4.50 |
| 10. | Providing platform to benches and painting to fencing in BNES park in Ward No.44 | 5.00 |
| 11. | Providing platform to benches and other development works in Rajiv Gandhinagar in Ward No.44 | 4.00 |
| | **Total** | **94.96** |

<u>ನಿರ್ಣಯ:–</u> **ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ: 26–01–2013 ರ ಟಿಪ್ಪಣಿಯನ್ನು ಒಪ್ಪುತ್ತಾ, ಸದರಿ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ ಕೆ.ಆರ್.ಐ.ಡಿ.ಎಲ್.ಸಂಸ್ಥೆ ಮುಖೇನ ಕೈಗೊಳ್ಳಲು ಸಮಿತಿಯು ತೀರ್ಮಾನಿಸಿತು.**

14. <u>ವಿಷಯದ ಸಂಖ್ಯೆ:ತೋ/ಸ್ಥಾ/ಸ/53/12–13, ದಿನಾಂಕ:29–01–2013</u>

ಮಹಾಲಕ್ಷ್ಮಿಪುರಂ ವಿಧಾನ ಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ–75ರ ಶಂಕರಮಠ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಉದ್ಯಾನವನಗಳ ಅಭಿವೃದ್ಧಿ ಕಾಮಗಾರಿಗಾಗಿ 2012–13ರ ಲೋಕೋಪಯೋಗಿ ಇಲಾಖೆಯ ದರಪಟ್ಟಿ ಹಾಗೂ ಅನುಮೋದಿತ ದರಪಟ್ಟಿ ಅನ್ವಯ ರೂ.57.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು, ಸದರಿ ಕಾಮಗಾರಿಗಳಿಗೆ 2012–13ನೇ ಸಾಲಿನ ಆಯವ್ಯಯದಲ್ಲಿ ವಾರ್ಡ್ ಸದಸ್ಯರ ಅನುದಾನದಡಿಯಲ್ಲಿ ರೂ.99.00ಲಕ್ಷಗಳನ್ನು (ಪಿ–0088) ಮೀಸಲಿರಿಸಲಾಗಿರುತ್ತದೆ. ತೋಟಗಾರಿಕೆ ಸ್ಥಾಯಿ ಸಮಿತಿಯ ದಿನಾಂಕ:04–10–2012ರ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದ ವಿಷಯ ಸಂಖ್ಯೆ:ತೋ/ಸ್ಥಾ/ಸ/23/2012–13, ದಿನಾಂಕ:04–10–2012 ರಲ್ಲಿ ಸದರಿ ಕಾಮಗಾರಿಗಳಿಗೆ ಟೆಂಡರ್ ಕರೆದು ಟೆಂಡರ್ ಪ್ರಕ್ರಿಯೆ ನಡೆಸುವ ಹಂತದಲ್ಲಿ ತುಂಬಾ ವಿಳಂಬವಾಗುವ ಪ್ರಯುಕ್ತ, ಸದಸ್ಯರ ಅನುದಾನವನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ವಹಿಸಿ ಕಾಮಗಾರಿಗಳನ್ನು ಕೈಗೊಳ್ಳಲು ಸಮಿತಿಯು ತೀರ್ಮಾನಿಸಲಾಗಿರುತ್ತದೆ.

ಆದ್ದರಿಂದ, ಸದರಿ ಕಾಮಗಾರಿಗಳಿಗೆ ತೋಟಗಾರಿಕೆ ಸ್ಥಾಯಿ ಸಮಿತಿಯ ನಿರ್ಣಯದಲ್ಲಿ ತಿಳಿಸಿರುವಂತೆ, ವಾರ್ಡ್ ಸದಸ್ಯರ ಅನುದಾನವನ್ನು ಟೆಂಡರ್ ಪ್ರಕ್ರಿಯೆಯ ಮುಖಾಂತರ ಕಾಮಗಾರಿಗಳನ್ನು ಕೈಗೊಳ್ಳಲು ತೀರ್ಮಾನಿಸಿರುವುದರಿಂದ, ಈ ಕೆಳಕಂಡ ಕಾಮಗಾರಿಗಳಿಗೆ **ಆಡಳಿತಾತ್ಮಕ ಅನುಮೋದನೆ ಮತ್ತು ಜಾಬ್ ಕೋಡ್ ನೀಡಲು** ಅನುಮೋದನೆ ಕೋರಿ

ಮುಂದುವರೆದಿದೆ. . . . .

ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ)ರವರ ದಿನಾಂಕ:24–01–2013 ರ ಟಿಪ್ಪಣಿ.

| Sl. No. | Name of Work | Est.Cost (Rs. In Lakshs) |
|---|---|---|
| 1. | Providing and fixing spike grill to Anjaneya gudda area in Kaverinagar in Ward No.75 | 5.00 |
| 2. | Painting platform to bench in pipeline park part-5 in Ward No.75 | 5.00 |
| 3. | Painting and sand filling to Children play area in SVGNSS park in Ward No.75 | 2.00 |
| 4. | Repair to pathway platform to benches and painting to Shambhavamurthy park in Ward No.75 | 5.00 |
| 5. | Painting, repair to pathway and other development work in pipeline park in Ward No.75 | 5.00 |
| 6. | Providing and fixing granite benches with platform coming under in Ward No.75 | 5.00 |
| 7. | Providing Moulding and Erections of Animal Sculpture of Cow, Calf, Men, Women, Zebra and Tiger in Kempegowda park in Ward No.75 | 15.00 |
| 8. | Repairs to fencing painting and other development work in Udayaravi park in Ward No.75 | 3.00 |
| 9. | Painting to kerb and other development works in Siddaruda Shivana park in Ward No.75 | 4.00 |
| 10. | Providing Sand filling in Children play area in Kempegowda and Udayaravi park in Ward No.75 | 3.00 |
| 11. | Providing new borewell in pipeline park in Ward No.75 | 5.00 |
| | **Total** | **57.00** |

<u>ನಿರ್ಣಯ</u>:– **ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:24–01–2013 ರ ಟಿಪ್ಪಣಿಯನ್ನು ಒಪ್ಪುತ್ತಾ, ಮಾನ್ಯ ಆಯುಕ್ತರು ಕಂಡಿಕೆ (9) ಮತ್ತು (10)ರಲ್ಲಿ ಆದೇಶಿಸಿರುವ ಕಾಮಗಾರಿಯನ್ನು ಹೊರತುಪಡಿಸಿ, ಸಮಿತಿಯ ಸದಸ್ಯರು ತಿಳಿಸಿರುವ ಬದಲಿ ಕಾಮಗಾರಿಗೆ ಜಾಬ್‌ಕೋಡ್ ನೀಡಿ, ಎಲ್ಲಾ ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್.ಸಂಸ್ಥೆಯ ಮುಖೇನ ಕಾಮಗಾರಿಯನ್ನು ಕೈಗೊಳ್ಳಲು ಸಮಿತಿಯು ತೀರ್ಮಾನಿಸಿತು.**

15. <u>ವಿಷಯದ ಸಂಖ್ಯೆ:ತೋ/ಸ್ಥಾ/ಸ/54/12–13, ದಿನಾಂಕ:29–01–2013</u>

ರಾಜರಾಜೇಶ್ವರಿ ವಲಯದ ಉತ್ತರಹಳ್ಳಿ ಕೆರೆಯ ಹಂತ–3ರ ಸಮಗ್ರ ಅಭಿವೃದ್ಧಿ ಕಾಮಗಾರಿಗಾಗಿ 2012–13ನೇ ಸಾಲಿನ ಪಿ.ಡಬ್ಲ್ಯೂ.ಡಿ ದರಸೂಚಿಯಂತೆ ಅಂದಾಜುಪಟ್ಟಿಯನ್ನು ಸಿದ್ಧಪಡಿಸಿದ್ದು, ಅಂದಾಜು ಮೊತ್ತ ರೂ.100.00 ಲಕ್ಷಗಳಾಗಿರುತ್ತವೆ. ಸದರಿ ಅಂದಾಜುಪಟ್ಟಿಗೆ 308–12–000030 ಕಾಮಗಾರಿ ಸಂಕೇತವನ್ನು ಪಡೆದಿದ್ದು, ಆಯುಕ್ತರವರ ಸಂಖ್ಯೆ:ಪಿಎಸ್‌ಆರ್/(ಜಿ)

ಮುಂದುವರೆದಿದೆ. . . . .

15818/12–13, ದಿನಾಂಕ:05–03–2012ರಂದು ಆಡಳಿತಾತ್ಮಕ ಅನುಮೋದನೆ ಪಡೆಯಲಾಗಿದ್ದು, ಮುಖ್ಯ ಅಭಿಯಂತರರು(ಕೆರೆಗಳು)ರವರ ಕಛೇರಿ ಸಂಖ್ಯೆ:CE/EC(Lakes)TS-02/12-13, ದಿನಾಂಕ:23–07–2012 ರಂದು ತಾಂತ್ರಿಕ ಮಂಜೂರಾತಿಯನ್ನು ಸಹ ನೀಡಿರುತ್ತಾರೆ.

ಅದರಂತೆ, ದಿನಾಂಕ:27–09–2012 ರಂದು ಕಾರ್ಯಪಾಲಕ ಅಭಿಯಂತರರು(ಕೆರೆಗಳು)ರವರು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಂಖ್ಯೆ:EE1/(Lakes)Tend/05/12-13, ದಿನಾಂಕ:27–09–2012 ರಂದು ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್ ಕರೆದಿದ್ದು, ನಾಲ್ಕು ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಿದ್ದು, ಇದರಲ್ಲಿ ಮೂರು ಗುತ್ತಿಗೆದಾರರು ತಾಂತ್ರಿಕವಾಗಿ ಅರ್ಹರಾಗಿದ್ದು, ಆರ್ಥಿಕ ಬಿಡ್‌ಗಳನ್ನು ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ತೆರೆದು ಪರಿಶೀಲಿಸಲಾಗಿ, ಸದರಿ ಟೆಂಡರ್‌ನ ಇ–ಪ್ರಕ್ಯೂರ್‌ಮೆಂಟ್‌ಗೆ ಅಪ್‌ಲೋಡ್ ಮಾಡುವ ಸಂದರ್ಭದಲ್ಲಿ ತಾಂತ್ರಿಕ ದೋಷದಿಂದಾಗಿ ರೂ.84.60 ಲಕ್ಷಗಳ ಟೆಂಡರಗಿಟ್ಟ ಮೊತ್ತದ ಬದಲು ರೂ.107.26 ಲಕ್ಷಗಳೆಂದು ತಪ್ಪಾಗಿ ದಾಖಲಾಗಿರುತ್ತದೆ ಹಾಗಾಗಿ ಸದರಿ ಟೆಂಡರ್‌ನ್ನು ರದ್ದುಪಡಿಸಲಾಯಿತು.

ಈ ಹಿನ್ನೆಲೆಯಲ್ಲಿ, ದಿನಾಂಕ:15–12–2013 ರಂದು ಕಾರ್ಯಪಾಲಕ ಅಭಿಯಂತರರು–1 (ಕೆರೆಗಳು) ರವರು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮರು ಟೆಂಡರ್‌ನ್ನು ರೂ.84.59814.05 ಗಳಿಗೆ ಸಂಖ್ಯೆ: EE1/(Lakes)Tend/11/12-13, ದಿನಾಂಕ:15–12–2012 ರಂದು ಎರಡು ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಟೆಂಡರ್‌ನ್ನು ಕರೆಯಲಾಗಿದ್ದು, ಸದರಿ ಟೆಂಡರ್‌ನಲ್ಲಿ ಏಕ ಮಾತ್ರ ಬಿಡ್‌ದಾರರಾದ **ಶ್ರೀ.ಎಂ.ಜೆ.ನಾಗರಾಜ್**ರವರು ಭಾಗವಹಿಸಿ ತಾಂತ್ರಿಕ ಬಿಡ್‌ನಲ್ಲಿ ಅರ್ಹರಾಗಿರುತ್ತಾರೆ. ಅಲ್ಲದೆ ಆರ್ಥಿಕ ಬಿಡ್‌ನಲ್ಲಿ ಕನಿಷ್ಠ ಬಿಡ್‌ದಾರರಾದ ಶ್ರೀ.ಎಂ.ಜೆ.ನಾಗರಾಜ್‌ರವರು ಸಲ್ಲಿಸಿರುವ ಮೊತ್ತ ರೂ.79,33,743.46 ಗಳಾಗಿದ್ದು, ಈ ಮೊತ್ತವನ್ನು 2012–13ನೇ ಸಾಲಿನ ದರಗಳಿಗೆ ಹೋಲಿಸಿದಾಗ ಶೇಕಡ –6.22% ರಷ್ಟು ಕಡಿಮೆ ದರಗಳಾಗಿರುತ್ತವೆ.

ಅದರಂತೆ, ಕನಿಷ್ಠ ಬಿಡ್‌ದಾರರಾದ **ಶ್ರೀ.ಎಂ.ಜೆ.ನಾಗರಾಜ್‌ರವರು** ಸಲ್ಲಿಸಿರುವ **ರೂ.79,33,743.00** (ರೂಪಾಯಿ ಎಪ್ಪತ್ತೊಂಭತ್ತು ಲಕ್ಷದ ಮೂವತ್ತ ಮೂರು ಸಾವಿರದ ಏಳುನೂರ ನಲವತ್ತ ಮೂರು ಮಾತ್ರ) ಗಳಿಗೆ ಟೆಂಡರ್ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:**25–01–2013** ರ ಟಿಪ್ಪಣಿ.

**<u>ನಿರ್ಣಯ:–</u> ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:25–01–2013 ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

## 16. <u>ವಿಷಯದ ಸಂಖ್ಯೆ:ತೋ/ಸ್ಥಾ/ಸ/55/12–13, ದಿನಾಂಕ:29–01–2013</u>

ಸರ್ಕಾರದ ಆದೇಶ ಸಂಖ್ಯೆ:ನಅಇ 305 ಎಂಎನ್‌ವೈ 2012, ದಿನಾಂಕ:04–08–2012ರ ಸರ್ಕಾರದ ಆದೇಶದನ್ವಯ ಬಿ.ಡಿ.ಎ ವತಿಯಿಂದ ಅಭಿವೃದ್ಧಿಗೊಳಿಸಿರುವ 07 ಕೆರೆಗಳನ್ನು ಹಾಗೂ ಎಲ್.ಡಿ.ಎ. ವಶದಲ್ಲಿರುವ 05 ಕೆರೆಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸಿ ನಿರ್ವಹಣೆಯನ್ನು ಪಾಲಿಕೆ ವತಿಯಿಂದಲೇ ಕೈಗೊಳ್ಳುವಂತೆ ಸರ್ಕಾರ ಆದೇಶಿಸಿರುತ್ತದೆ. ಅದರಂತೆ, ಈ ಕೆಳಕಂಡ ಕೆರೆಗಳ ನಿರ್ವಹಣೆಯನ್ನು ಬಿ.ಬಿ.ಎಂ.ಪಿ. ವತಿಯಿಂದ ಮಾಡಲು

ಮುಂದುವರೆದಿದೆ. . . . .

ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ಆಯುಕ್ತರವರ ದಿನಾಂಕ:24–01–2013 ರ ಟಿಪ್ಪಣಿ.

**<u>ನಿರ್ಣಯ</u>:– ಮಾನ್ಯ ಆಯುಕ್ತರವರ ದಿನಾಂಕ:24–01–2013 ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

**17. <u>ವಿಷಯದ ಸಂಖ್ಯೆ:ತೋ/ಸ್ಥಾ/ಸ/56/12–13, ದಿನಾಂಕ:02–02–2013</u>**

ದಾಸರಹಳ್ಳಿ ವಲಯದ, ಮಲ್ಲಸಂದ್ರ ಗ್ರಾಮ, ವಾರ್ಡ್ ನಂ.13ರ ಸರ್ವೆ ನಂಬರ್ 33 ರಲ್ಲಿ ಸುಮಾರು 30 ಎಕರೆ ಅಬೆಂಡೆಂಟ್ ಕ್ವಾರಿ ಪ್ರದೇಶವಿದ್ದು, ಈ ಪ್ರದೇಶವನ್ನು ಒತ್ತುವರಿಯಿಂದ ರಕ್ಷಿಸಿಕೊಳ್ಳುವ ನಿಟ್ಟಿನಲ್ಲಿ ಹಾಗೂ ಆ ಪ್ರದೇಶದ ಸುತ್ತಲಿನ ಸಾರ್ವಜನಿಕರಿಗೆ ಅನುಕೂಲವಾಗುವ ರೀತಿಯಲ್ಲಿ ಸೂಕ್ತ ವೃಕ್ಷ ಉದ್ಯಾನವನವನ್ನು ನಿರ್ಮಿಸುವುದು ಅತ್ಯಗತ್ಯವಾಗಿರುತ್ತದೆ. ಈ ಒಂದು ಪ್ರದೇಶದ ಕಂದಕಕ್ಕೆ ಮಣ್ಣು / ಡೆಬ್ರೀಸ್‌ನ್ನು ತುಂಬುವ ಕಾರ್ಯವನ್ನು ಕೈಗೊಳ್ಳಲು ಈಗಾಗಲೇ ವಲಯ ಮಟ್ಟದಲ್ಲಿ ಅಧಿಸೂಚನೆಯನ್ನು ಹೊರಡಿಸಲಾಗಿದೆ ಹಾಗೂ ಈ ಪ್ರದೇಶದ ಸುತ್ತಲೂ ಸದರಿ ಆಸ್ತಿಗೆ ಚೈನ್ ಲಿಂಕ್ ಪೆನ್ಸಿಂಗ್ ಬೇಲಿಯನ್ನು ನಿರ್ಮಿಸುವ ನಿಟ್ಟಿನಲ್ಲಿ 2012–13ನೇ ಸಾಲಿನ ದರಪಟ್ಟಿ ಆಧಾರದ ಮೇಲೆ ಅಂದಾಜುಪಟ್ಟಿಯನ್ನು ರೂ.76.35 ಲಕ್ಷಗಳಿಗೆ ತಯಾರಿಸಿ ಅನುಮೋದನೆಗೆ ಸಲ್ಲಿಸಲಾಗಿದೆ.

ಸದರಿ ಅಂದಾಜು ವೆಚ್ಚವನ್ನು 2012–13ನೇ ಆಯವ್ಯಯ ಲೆಕ್ಕಶೀರ್ಷಿಕೆ ಪಿಓ–290 (ಪಾಲಿಕೆಯ ಖಾಲಿ ಜಾಗಗಳಿಗೆ ಬೇಲಿ ನಿರ್ಮಾಣ) ರ ಅಡಿಯಲ್ಲಿ ಇರುವ ಅನುದಾನ ರೂ.500.00 ಲಕ್ಷಗಳಲ್ಲಿ, ಸದರಿ ಕಾಮಗಾರಿಗೆ ಜಾಬ್‌ಕೋಡ್ ನೀಡಲು ಹಾಗೂ ಆಡಳಿತಾತ್ಮಕ ಮಂಜೂರಾತಿ ನೀಡಲು ಹಾಗೂ ಕೆಲಸದ ತುರ್ತಿನಿಂದಾಗಿ ಕಾಮಗಾರಿಯನ್ನು ಇ–ಪ್ರೊಕ್ಯೂರ್‌ಮೆಂಟ್ (ಅಲ್ಪಾವಧಿ) ಟೆಂಡರ್ ಪ್ರಕ್ರಿಯೆ ಮುಖಾಂತರ ಕೈಗೊಳ್ಳಲು ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ: 31–01–2013 ರ ಟಿಪ್ಪಣಿ.

**<u>ನಿರ್ಣಯ</u>:– ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:31–01–2013 ರ ಟಿಪ್ಪಣಿಯನ್ನು ಒಪ್ಪುತ್ತಾ, ಸದರಿ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ ಕೆ.ಆರ್.ಐ.ಡಿ.ಎಲ್.ಸಂಸ್ಥೆ ಮುಖೇನ ಕೈಗೊಳ್ಳಲು ಸಮಿತಿಯು ತೀರ್ಮಾನಿಸಿತು.**

**18. <u>ವಿಷಯದ ಸಂಖ್ಯೆ:ತೋ/ಸ್ಥಾ/ಸ/57/12–13, ದಿನಾಂಕ:02–02–2013</u>**

ಗೋವಿಂದರಾಜನಗರ ವಿಧಾನ ಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ.127, ಮೂಡಲಪಾಳ್ಯ ವ್ಯಾಪ್ತಿಯಲ್ಲಿ ಬರುವ ಸ್ವಾಮಿ ವಿವೇಕಾನಂದ ಉದ್ಯಾನವನದ ಅಭಿವೃದ್ಧಿ ಕಾಮಗಾರಿಗಾಗಿ 2010–11ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರಪಟ್ಟಿ ಅನ್ವಯ ರೂ.5.00ಲಕ್ಷಗಳಿಗೆ ಅಂದಾಜುಪಟ್ಟಿಯನ್ನು ತಯಾರಿಸಿದ್ದು, ಸದರಿ ಕಾಮಗಾರಿಗೆ 2011–12ನೇ ಸಾಲಿನ ಆಯವ್ಯಯದಲ್ಲಿ ರೂ.5.00ಲಕ್ಷಗಳನ್ನು (ಪಿ–0311) ಮೀಸಲಿರಿಸಲಾಗಿದ್ದು, ಹಾಗೂ ದಿನಾಂಕ:17–01–2011 ರಂದು ಜಾಬ್ ಸಂಕೇತ 127–11–000020 ನೀಡಲಾಗಿರುತ್ತದೆ ಹಾಗೂ ಕಾರ್ಯಪಾಲಕ ಅಭಿಯಂತರರು (ಯೋಜನೆ–ದಕ್ಷಿಣ)ರವರು ಆಡಳಿತಾತ್ಮಕ ಮಂಜೂರಾತಿ ಸಂಖ್ಯೆ:ಕಾಪಾಅ(ಯೋ–ದ)/ಆಮ/06/ 2010–11, ದಿನಾಂಕ:14–03–2011 ಮತ್ತು ತಾಂತ್ರಿಕ ಮಂಜೂರಾತಿ ಸಂಖ್ಯೆ:ಕಾಪಾಅ(ಯೋ–ದ)

ಮುಂದುವರೆದಿದೆ. . . . .

ತಾಮ/07/2010–11, ದಿನಾಂಕ:14–03–2011 ನೀಡಿದ್ದು, ಸದರಿ ಕಛೇರಿಯಿಂದಲೇ ಕರಡು ಟೆಂಡರ್ ಷೆಡ್ಯೂಲ್–ಬಿಗೆ ಅನುಮೋದನೆ ನೀಡಲಾಗಿದೆ ಹಾಗೂ ಸದರಿ ಕಾಮಗಾರಿಯನ್ನು ನಿರ್ವಹಿಸಲು ಕೆಲಸದ ಆದೇಶ ಸಂಖ್ಯೆ: ಕಾಪಾಅ(ಯೋ–ದ)/ಕೆಅ/35/2011–12, ದಿನಾಂಕ: 02–08–2011 ರಂದು ನೀಡಿ ಗುತ್ತಿಗೆ ಒಡಂಬಡಿಕೆಯನ್ನು ಸಹ ಮಾಡಿಕೊಂಡಿರುತ್ತಾರೆ. ಆದ್ದರಿಂದ ಮೇಲ್ಕಂಡ ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್. ಬೆಂಗಳೂರು ಸಂಸ್ಥೆಯಿಂದ ನಿರ್ವಹಿಸಿರುವುದನ್ನು ಸ್ಥಿರಿಕರಣ ನೀಡಲು ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:01–02–2013 ರ ಟಿಪ್ಪಣಿ.

| ಕ್ರ. ಸಂ. | ಕಾಮಗಾರಿ ಹೆಸರು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ |
|---|---|---|
| 1. | Providing and laying new pathway filling sand to children's play area in sway Vivekananda Park in Ward No.127 | 5.00 |

**<u>ನಿರ್ಣಯ:</u>– ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:01–02–2013 ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

**19. <u>ವಿಷಯದ ಸಂಖ್ಯೆ:ತೋ/ಸ್ಥಾ/ಸ/ 58/12–13, ದಿನಾಂಕ: 06–02–2013</u>**

ಬೊಮ್ಮನಹಳ್ಳಿ ವಲಯ, ವಾರ್ಡ್ ಸಂಖ್ಯೆ.196ರ ವ್ಯಾಪ್ತಿಯ ಉದ್ಯಾನವನವನ್ನು ಅಭಿವೃದ್ಧಿಪಡಿಸಲು ತೋಟಗಾರಿಕೆ ಸ್ಥಾಯಿ ಸಮಿತಿಯ ದಿನಾಂಕ: 04–10–2012ರ ವಿಷಯದ ಸಂಖ್ಯೆ.ತೋ/ಸ್ಥಾ.ಸ/23/2012–13 ರಲ್ಲಿ ಕೈಗೊಂಡ ನಿರ್ಣಯದಲ್ಲಿ ಇರುವಂತೆ, 2012–13ನೇ ಸಾಲಿನ ಆಯವ್ಯಯದಲ್ಲಿ ಉಳಿಕೆ 1200.00 ಲಕ್ಷಗಳನ್ನು ತೋಟಗಾರಿಕೆ ಸ್ಥಾಯಿ ಸಮಿತಿ ಸದಸ್ಯರುಗಳ ವಾರ್ಡ್‌ಗಳಲ್ಲಿ ಉದ್ಯಾನವನ ಅಭಿವೃದ್ಧಿಪಡಿಸಲು ಅನುದಾನವನ್ನು ಕಾಯ್ದಿರಿಸಿ ಕಾಮಗಾರಿಯನ್ನು ಕೈಗೊಳ್ಳುವಂತೆ ನಿರ್ಣಯ ಕೈಗೊಂಡಿರುತ್ತಾರೆ.

ಅದರಂತೆ, ಬೊಮ್ಮನಹಳ್ಳಿ ವಲಯ ವ್ಯಾಪ್ತಿಯ ವಾರ್ಡ್ ಸಂಖ್ಯೆ.196ರ ನಾರಾಯಣನಗರ, 2ನೇ ಹಂತದಲ್ಲಿ ಬರುವ ಉದ್ಯಾನವನಕ್ಕೆ ನಡೆದಾರಿ ಹಾಗೂ ಉದ್ಯಾನವನಕ್ಕೆ ಇತರೇ ಅಭಿವೃದ್ಧಿ ಕಾಮಗಾರಿಗಳಿಗೆ 2012–13ನೇ ಸಾಲಿನ ಆಯವ್ಯಯದ ತೋಟಗಾರಿಕೆ ಮತ್ತು ಪರಿಸರ ಅಭಿವೃದ್ಧಿ ಅಡಿಯಲ್ಲಿ ಬರುವ ***"ಗುತ್ತಿಗೆ ಆಧಾರದ ಮೇಲೆ ಉದ್ಯಾನವನಗಳ ನಿರ್ವಹಣೆ ಪಿ.ಓ.088"*** ಲೆಕ್ಕಶೀರ್ಷಿಕೆಯಲ್ಲಿ ಕಾಮಗಾರಿ ಕೈಗೊಳ್ಳಲು **ರೂ.95.00** ಲಕ್ಷಗಳ ಮೊತ್ತದ ಅನುದಾನಕ್ಕೆ ಈ ಕೆಳಕಂಡ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಹಾಗೂ ಸದರಿ ಕಾಮಗಾರಿಗಳನ್ನು ಅತಿ ಜರೂರಾಗಿ ಕೆ.ಆರ್.ಐ.ಡಿ.ಎಲ್. ಸಂಸ್ಥೆಯಿಂದ ನಿರ್ವಹಿಸಬೇಕೆಂದು ಕಂಡಿಕೆ (8) ರಲ್ಲಿ ತಿಳಿಸಿದ್ದು, ಅದರಂತೆ ಸದರಿ ಕಾಮಗಾರಿಗಳನ್ನು ನಿಯಮಾನುಸಾರ ಟೆಂಡರ್ ಪ್ರಕ್ರಿಯೆ ಮುಖಾಂತರ ನಿರ್ವಹಿಸಲು ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ **ದಿನಾಂಕ: 04–02–2013** ರ ಟಿಪ್ಪಣಿ.

| Sl. No. | Name of the work | Est.Cost in Lakhs |
|---|---|---|
| 1. | Providing Watchmen shed and Borewell other developmental works to Narayana Nagara, 2nd Stage in Ward No.196, Bommanahalli zone. | 16.50 |

ಮುಂದುವರೆದಿದೆ. . . . .

| | | |
|---|---|---|
| 2. | Providing Pathway and other developmental works to Narayana Nagara, 2nd Stage in Ward No.196, Bommanahalli zone. | 36.00 |
| 3. | Detailed Estimate for Development of Tree Park at Narayana Nagara, 2nd Stage in Ward No.196, Bommanahalli zone. | 42.50 |
| | **Total** | **95.00** |

**ನಿರ್ಣಯ:–** **ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:04–02–2013 ರ ಟಿಪ್ಪಣಿಯನ್ನು ಒಪ್ಪುತ್ತಾ, ಸದರಿ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ ಕೆ.ಆರ್.ಐ.ಡಿ.ಎಲ್.ಸಂಸ್ಥೆ ಮುಖೇನ ಕೈಗೊಳ್ಳಲು ಸಮಿತಿಯು ತೀರ್ಮಾನಿಸಿತು.**

**20. ವಿಷಯ ಸಂಖ್ಯೆ:ತೋ/ಸ್ಥಾ/ಸ/ 59/12–13, ದಿನಾಂಕ: 06–02–2013**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ಯಲಹಂಕ ವಲಯದ ತೋಟಗಾರಿಕೆ ಅಧೀಕ್ಷಕರು ವತಿಯಿಂದ, ಯಲಹಂಕ ವಲಯದ ವಾರ್ಡ್ ಸಂಖ್ಯೆ–01 ರಲ್ಲಿ ಉದ್ಯಾನವನಗಳನ್ನು ಅಭಿವೃದ್ಧಿಪಡಿಸಲು ಈಗಾಗಲೇ ಪಾಲಿಕೆಯ ತೋಟಗಾರಿಕೆ ಸ್ಥಾಯಿ ಸಮಿತಿಯಲ್ಲಿ ನಿರ್ಣಯ ಸಂಖ್ಯೆ:ತೋ/ಸ್ಥಾ/ಸ/23/2012–13, ದಿನಾಂಕ:04–10–2012 ರಲ್ಲಿ ವಾರ್ಡ್ ಸಂಖ್ಯೆ–01 ರ ವ್ಯಾಪ್ತಿಗೆ ಸಂಬಂಧಿಸಿದಂತೆ ಸಮಿತಿಯ ಸದಸ್ಯರುಗಳ ವಾರ್ಡ್‌ಗಳಿಗೆ ಕಾಯ್ದಿರಿಸಿರುವ ಅನುದಾನದಲ್ಲಿ **ರೂ.100.00** ಲಕ್ಷಗಳನ್ನು ಮೀಸಲಿಡಲಾಗಿದ್ದು ನಿರ್ಣಯವಾಗಿರುತ್ತದೆ.

ಪಾಲಿಕೆಯ 2012–13ನೇ ಸಾಲಿನ ಲೆಕ್ಕ ಶೀರ್ಷಿಕೆ ಪಿ–0311, ಪಿ–0299 ಅಡಿಯಲ್ಲಿ ರೂ.100.00 ಲಕ್ಷಗಳನ್ನು, ಉದ್ಯಾನವನಗಳ ಕಾಮಗಾರಿಯನ್ನು ಅಭಿವೃದ್ಧಿಪಡಿಸಲು ಸ್ಥಳೀಯ ಪಾಲಿಕೆ ಸದಸ್ಯರು ಕೋರಿರುತ್ತಾರೆ.

| **ಅಭಿವೃದ್ಧಿಪಡಿಸಬೇಕಾಗಿರುವ ಉದ್ಯಾನವನಗಳು** | | | |
|---|---|---|---|
| **ಕ್ರ. ಸಂ.** | **ಉದ್ಯಾನವನಗಳ ವಿವರ** | **ಪಿ ಕೋಡ್ ಸಂಖ್ಯೆ** | **ಅಂದಾಜು ವೆಚ್ಚ (ರೂ.ಲಕ್ಷಗಳಲ್ಲಿ)** |
| 1. | ವಾರ್ಡ್ ಸಂಖ್ಯೆ.1 ರ ಮಾರುತಿನಗರ ಬಡಾವಣೆಯ ಉದ್ಯಾನವನದ ಭೂವಿನ್ಯಾಸ ಅಭಿವೃದ್ಧಿ ಕಾಮಗಾರಿ. | **ಪಿ–0311** | 29.00 |
| 2. | ವಾರ್ಡ್ ಸಂಖ್ಯೆ.1 ರ ಶಿವನಹಳ್ಳಿ ಯು.ಎ.ಎಸ್. ಬಡಾವಣೆಯ ಉದ್ಯಾನವನದ ಭೂವಿನ್ಯಾಸ ಅಭಿವೃದ್ಧಿ ಕಾಮಗಾರಿ. | **ಪಿ–0311** | 8.50 |
| 3. | ವಾರ್ಡ್ ಸಂಖ್ಯೆ.1 ರ ಯಲಹಂಕ ಸರ್ಕಾರಿ ಶಾಲೆ ಪ್ರೌಢಶಾಲೆ ಮತ್ತು ಕಾಲೇಜು ಆವರಣದಲ್ಲಿ ಭೂವಿನ್ಯಾಸ ಅಭಿವೃದ್ಧಿ ಕಾಮಗಾರಿ ಹಾಗೂ ಇತರೇ ಕಾಮಗಾರಿ. | **ಪಿ–0299** | 30.00 |

ಮುಂದುವರೆದಿದೆ. . . . .

| | | | |
|---|---|---|---|
| 4. | ವಾರ್ಡ್ ಸಂಖ್ಯೆ.1 ರ ಶಿವನಹಳ್ಳಿ ಉದ್ಯಾನವನದಲ್ಲಿ ಬೋರ್‌ವೆಲ್ ಹಾಕುವ ಹಾಗೂ ಇತರೇ ಕಾಮಗಾರಿ. | **ಪಿ–0299** | 32.50 |
| | **ಒಟ್ಟು ರೂ.** | | **100.00** |

2012–13ನೇ ಸಾಲಿನಲ್ಲಿ ಮೇಲ್ಕಂಡ ಕಾಮಗಾರಿಗಳನ್ನು ತುರ್ತಾಗಿ ಅನುಷ್ಠಾನಗೊಳಿಸಲು ತೋಟಗಾರಿಕೆ ಸ್ಥಾಯಿ ಸಮಿತಿಯು ದಿನಾಂಕ:04–10–2012 ರ ಸಭೆಯಲ್ಲಿ ತೀರ್ಮಾನಿಸಿರುವ ಮೇರೆಗೆ ವಾರ್ಡ್ ಸಂಖ್ಯೆ.01ರ ಉದ್ಯಾನವನಗಳ ಅಭಿವೃದ್ಧಿಗಾಗಿ ರೂ.100.00ಲಕ್ಷಗಳಲ್ಲಿ ಸಮಿತಿಯು ಹಂಚಿಕೆ ಮಾಡಿರುವ ಅನುದಾನದ ಅಡಿಯಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ಮತ್ತು ಜಾಬ್ ಕೋಡ್ ನೀಡಲು ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ **ದಿನಾಂಕ:05–02–2013** ರ ಟಿಪ್ಪಣಿ.

**ನಿರ್ಣಯ:–** **ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:05–02–2013 ರ ಟಿಪ್ಪಣಿಯನ್ನು ಒಪ್ಪುತ್ತಾ, ಸದರಿ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ ಕೆ.ಆರ್.ಐ.ಡಿ.ಎಲ್.ಸಂಸ್ಥೆ ಮುಖೇನ ಕೈಗೊಳ್ಳಲು ಸಮಿತಿಯು ತೀರ್ಮಾನಿಸಿತು.**

## 21. ವಿಷಯ ಸಂಖ್ಯೆ:ತೋ/ಸ್ಥಾ/ಸ/60/12–13, ದಿನಾಂಕ: 06–02–2013

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ಪೂರ್ವ ವಲಯ ವಾರ್ಡ್ ನಂ.28ರ ವ್ಯಾಪ್ತಿಯಲ್ಲಿ ಬರುವ ಉದ್ಯಾನವನಗಳನ್ನು ಅಭಿವೃದ್ಧಿಪಡಿಸಲು ಈಗಾಗಲೇ ಪಾಲಿಕೆಯ ತೋಟಗಾರಿಕೆ ಸ್ಥಾಯಿ ಸಮಿತಿಯಲ್ಲಿ ನಿರ್ಣಯ ಸಂಖ್ಯೆ:ತೋ/ಸ್ಥಾ/ಸ/23/2012–13, ದಿನಾಂಕ: 04–10–2012 ರಲ್ಲಿ ವಾರ್ಡ್ ಸಂಖ್ಯೆ–28 ರ ವ್ಯಾಪ್ತಿಗೆ ಸಂಬಂಧಿಸಿದಂತೆ, ಸಮಿತಿಯ ಸದಸ್ಯರುಗಳ ವಾರ್ಡ್‌ಗಳಿಗೆ ಕಾಯ್ದಿರಿಸಿರುವ ಅನುದಾನದಲ್ಲಿ **ರೂ.95.00** ಲಕ್ಷಗಳನ್ನು ಮೀಸಲಿಡಲಾಗಿದ್ದು ನಿರ್ಣಯವಾಗಿರುತ್ತದೆ.

ಪಾಲಿಕೆಯ 2012–13ನೇ ಸಾಲಿನ ಲೆಕ್ಕ ಶೀರ್ಷಿಕೆ ಪಿಓ–299, ಪಿಓ–088 ಅಡಿಯಲ್ಲಿ **ರೂ.95.00** ಲಕ್ಷಗಳನ್ನು ಉದ್ಯಾನವನಗಳ ಕಾಮಗಾರಿಯನ್ನು ಅಭಿವೃದ್ಧಿಪಡಿಸಲು ಸ್ಥಳೀಯ ಪಾಲಿಕೆ ಸದಸ್ಯರು ಕೋರಿರುತ್ತಾರೆ.

| **ಅಭಿವೃದ್ಧಿಪಡಿಸಬೇಕಾಗಿರುವ ಉದ್ಯಾನವನಗಳು** | | | |
|---|---|---|---|
| **ಕ್ರ. ಸಂ.** | **ಉದ್ಯಾನವನಗಳ ವಿವರ** | **ಪಿ ಕೋಡ್ ಸಂಖ್ಯೆ** | **ಅಂದಾಜು ವೆಚ್ಚ (ರೂ.ಲಕ್ಷಗಳಲ್ಲಿ)** |
| 1. | ವಾರ್ಡ್ ನಂ.28ರ ರಾಮಸ್ವಾಮಿ ದೇವಸ್ಥಾನದ ಉದ್ಯಾನವನದ ಭೂವಿನ್ಯಾಸಗೊಳಿಸಿ ಅಭಿವೃದ್ಧಿಪಡಿಸುವುದು. | **ಪಿಓ–299** | 15.00 |

ಮುಂದುವರೆದಿದೆ. . . . .

| | | | |
|---|---|---|---|
| 2. | ವಾರ್ಡ್ ನಂ.28ರ, ರಾಮಸ್ವಾಮಿ ಪಾಳ್ಯದಲ್ಲಿ ಆಟದ ಮೈದಾನದ ಪಕ್ಕದ ಉದ್ಯಾನವನ ಭೂವಿನ್ಯಾಸಗೊಳಿಸಿ ಅಭಿವೃದ್ಧಿಪಡಿಸುವುದು. | **ಪಿಓ–299** | 15.00 |
| 3. | ವಾರ್ಡ್ ನಂ.28ರ, ಕಮ್ಮನಹಳ್ಳಿ ವ್ಯಾಪ್ತಿಯಲ್ಲಿರುವ ವಾರ್ಡ್ ಕಛೇರಿ ಪಕ್ಕದಲ್ಲಿರುವ ಉದ್ಯಾನವನವನ್ನು ಅಭಿವೃದ್ಧಿಪಡಿಸುವುದು. | **ಪಿಓ–299** | 15.00 |
| 4. | ವಾರ್ಡ್ ನಂ.28ರ, ರಾಮಸ್ವಾಮಿ ಪಾಳ್ಯದ ದೇವಸ್ಥಾನದ ಉದ್ಯಾನವನದಲ್ಲಿ ಬೋರ್‌ವೆಲ್ ಬೆಂಚುಗಳು ಹಾಗೂ ಚೈನ್‌ಲಿಂಕ್ ರಿಪೇರಿ, ಸೀನಿಯರ್ ಸಿಟಿಜನ್ ಶೆಲ್ಟರ್ ಮತ್ತು ಇತರೇ ಸಿವಿಲ್ ಅಭಿವೃದ್ಧಿ ಕೆಲಸಗಳು. | **ಪಿಓ–088** | 19.95 |
| 5. | ವಾರ್ಡ್ ನಂ.28ರ, ರಾಮಸ್ವಾಮಿ ಪಾಳ್ಯದ ಆಟದ ಮೈದಾನದ ಪಕ್ಕದ ಉದ್ಯಾನವನದಲ್ಲಿ ಬೋರ್‌ವೆಲ್ ಬೆಂಚುಗಳು ಹಾಗೂ ಚೈನ್‌ಲಿಂಕ್ ರಿಪೇರಿ, ಸೀನಿಯರ್ ಸಿಟಿಜನ್ ಶೆಲ್ಟರ್ ಮತ್ತು ಇತರೇ ಸಿವಿಲ್ ಅಭಿವೃದ್ಧಿ ಕೆಲಸಗಳು. | **ಪಿಓ–088** | 15.00 |
| 6. | ವಾರ್ಡ್ ನಂ.28ರ, ಕಮ್ಮನಹಳ್ಳಿ ವ್ಯಾಪ್ತಿಯಲ್ಲಿರುವ ವಾರ್ಡ್ ಕಛೇರಿ ಪಕ್ಕದಲ್ಲಿರುವ ಉದ್ಯಾನವನದಲ್ಲಿ ಬೋರ್‌ವೆಲ್ ಬೆಂಚುಗಳು ಹಾಗೂ ಚೈನ್‌ಲಿಂಕ್ ರಿಪೇರಿ, ಸೀನಿಯರ್ ಸಿಟಿಜನ್ ಶೆಲ್ಟರ್ ಮತ್ತು ಇತರೇ ಸಿವಿಲ್ ಅಭಿವೃದ್ಧಿ ಕೆಲಸಗಳು. | **ಪಿಓ–088** | 15.00 |
| | **ಒಟ್ಟು ರೂ.** | | **95.00** |

2012–13ನೇ ಸಾಲಿನಲ್ಲಿ ಮೇಲ್ಕಂಡ ಕಾಮಗಾರಿಗಳನ್ನು ತುರ್ತಾಗಿ ಅನುಷ್ಠಾನಗೊಳಿಸಲು ತೋಟಗಾರಿಕೆ ಸ್ಥಾಯಿ ಸಮಿತಿಯು ದಿನಾಂಕ:04–10–2012 ರ ಸಭೆಯಲ್ಲಿ ತೀರ್ಮಾನಿಸಿರುವ ಮೇರೆಗೆ ವಾರ್ಡ್ ಸಂಖ್ಯೆ.28ರ ಉದ್ಯಾನವನಗಳ ಅಭಿವೃದ್ಧಿಗಾಗಿ ರೂ.95.00ಲಕ್ಷಗಳಲ್ಲಿ ಸಮಿತಿಯು ಹಂಚಿಕೆ ಮಾಡಿರುವ ಅನುದಾನದ ಅಡಿಯಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ಮತ್ತು ಜಾಬ್ ಕೋಡ್ ನೀಡಲು ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ **ದಿನಾಂಕ:05–02–2013 ರ ಟಿಪ್ಪಣಿ.**

**<u>ನಿರ್ಣಯ:</u>– ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:05–02–2013 ರ ಟಿಪ್ಪಣಿಯನ್ನು ಒಪ್ಪುತ್ತಾ, ಸದರಿ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ ಕೆ.ಆರ್.ಐ.ಡಿ.ಎಲ್.ಸಂಸ್ಥೆ ಮುಖೇನ ಕೈಗೊಳ್ಳಲು ಸಮಿತಿಯು ತೀರ್ಮಾನಿಸಿತು.**

ಮುಂದುವರೆದಿದೆ. . . . .

ಕೊನೆಯದಾಗಿ, ಈ ಸಭೆಯಲ್ಲಿ ಮೇಲಿನ ವಿಷಯದ ಬಗ್ಗೆ ಚರ್ಚಿಸುವಾಗ ಅಧಿಕಾರಿಗಳ ಸಲಹೆ ಹಾಗೂ ಸಮಿತಿಯ ಸದಸ್ಯರ ಸಲಹೆಗಳನ್ನು ಪಡೆದು ನಿರ್ಣಯ ಕೈಗೊಂಡು ಕಾಮಗಾರಿಗಳನ್ನು ಕೈಗೊಳ್ಳಲು ಕಾರ್ಯಪ್ರವೃತ್ತರಾಗಬೇಕೆಂದು, ಮಾನ್ಯ ಆಯುಕ್ತರನ್ನು ಕೋರುತ್ತಾ, ವಂದನೆಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಅಧ್ಯಕ್ಷರು
ತೋಟಗಾರಿಕೆ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು:–**

- ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
- ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
- ಆಡಳಿತ ಪಕ್ಷ / ವಿರೋಧ ಪಕ್ಷ ಮತ್ತು ಜೆಡಿಎಸ್ ಪಕ್ಷದ ನಾಯಕರುಗಳಿಗೆ ಕಳುಹಿಸಿದೆ.
- ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಕೋರಿದೆ.
- *ವಿಶೇಷ / ಅಪರ ಆಯುಕ್ತರು(ಯೋಜನೆ)* ರವರಿಗೆ ಕಳುಹಿಸಲಾಗಿದೆ.
- ಎಲ್ಲಾ ಸ್ಥಾಯಿ ಸಮಿತಿ ಅಧ್ಯಕ್ಷರುಗಳಿಗೆ ಕಳುಹಿಸಲಾಗಿದೆ.
- *ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ರವರಿಗೆ ಕಳುಹಿಸಲಾಗಿದೆ.*
- *ಮುಖ್ಯ ಅಭಿಯಂತರರು(ಕೆರೆಗಳು–ಪರಿಸರ ಕೋಶ) ರವರಿಗೆ ಕಳುಹಿಸಲಾಗಿದೆ.*
- *ಮುಖ್ಯ ಲೆಕ್ಕಾಧಿಕಾರಿ ರವರಿಗೆ ಕಳುಹಿಸಲಾಗಿದೆ.*
- *ಉಪ /ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು(ಉತ್ತರ–ದಕ್ಷಿಣ) ರವರಿಗೆ ಕಳುಹಿಸಲಾಗಿದೆ.*
- *ಕಾ.ಪಾ.ಅ.(ಕೆರೆಗಳು–ಪರಿಸರ ಕೋಶ 1, 2, 3, 4, 5,) ಹಾಗೂ ಕಾ.ಪಾ.ಅ.(ಯೋಜನೆ – (ಪೂರ್ವ/ಪಶ್ಚಿಮ/ದಕ್ಷಿಣ/ ರಾಜರಾಜೇಶ್ವರಿನಗರ/ ದಾಸರಹಳ್ಳಿ/ಬೊಮ್ಮನಹಳ್ಳಿ/ಯಲಹಂಕ/ ಮಹದೇವಪುರ)ರವರಿಗೆ ಕಳುಹಿಸಲಾಗಿದೆ.*
- *ತೋಟಗಾರಿಕೆ ಅಧೀಕ್ಷಕರು (ಪೂರ್ವ/ ಪಶ್ಚಿಮ/ ದಕ್ಷಿಣ/ ರಾಜರಾಜೇಶ್ವರಿನಗರ/ ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ) ರವರಿಗೆ ಕಳುಹಿಸಲಾಗಿದೆ.*
- *ವಲಯ ಅರಣ್ಯಾಧಿಕಾರಿಗಳು(ಪೂರ್ವ/ ಪಶ್ಚಿಮ/ ದಕ್ಷಿಣ/ ರಾಜರಾಜೇಶ್ವರಿನಗರ/ ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ) ರವರಿಗೆ ಕಳುಹಿಸಲಾಗಿದೆ.*
- *ಕಛೇರಿ ಪ್ರತಿ*

ಮುಂದುವರೆದಿದೆ. . . . .

## ದಿನಾಂಕ: 22–02–2013 ರಂದು ತೋಟಗಾರಿಕೆ ಸ್ಥಾಯಿ ಸಮಿತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಉದ್ಯಾನವನಗಳ ಅಭಿವೃದ್ಧಿ ಮತ್ತು ನಿರ್ವಹಣೆ ಹಾಗೂ ನಗರವ್ಯಾಪ್ತಿ ಅರಣ್ಯೀಕರಣ ಮತ್ತು ಪರಿಸರ ನಿರ್ವಹಣೆಗೆ ಸಂಬಂಧಪಟ್ಟಂತೆ ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದಸ್ಯರು<br>ಶ್ರೀಯುತರಾದ : | | | ಹಾಜರಿದ್ದ ಅಧಿಕಾರಿಗಳು<br>ಶ್ರೀಯುತರಾದ | |
|---|---|---|---|---|
| 1 | **ಶ್ರೀ.ವೈ.ಎನ್.ಅಶ್ವಥ್** | ಅಧ್ಯಕ್ಷರು | 1 | ಕೌನ್ಸಿಲ್ ಕಾರ್ಯದರ್ಶಿ |
| 2 | ಶ್ರೀ.ಎನ್.ಚಂದ್ರಶೇಖರ್‌ರಾಜು | | 2 | ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ |
| 3 | ಶ್ರೀ.ಎಂ.ಸಿ.ಶ್ರೀನಿವಾಸ್ | ಸದಸ್ಯರು | 3 | ಉಪ ಅರಣ್ಯ ಸಂರಕ್ಷಣಾಧಿಕಾರಿ(ಉತ್ತರ) & (ದಕ್ಷಿಣ) |
| 4 | ಶ್ರೀಮತಿ.ಶಕುಂತಲ.ಎನ್ | ಸದಸ್ಯರು | 4 | ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ(ಉತ್ತರ) & (ದಕ್ಷಿಣ) |
| 5 | ಶ್ರೀಮತಿ.ನಂದಿನಿ.ಕೆ | ಸದಸ್ಯರು | 5 | ವಲಯ ಅರಣ್ಯಾಧಿಕಾರಿಗಳು–**(ಪೂರ್ವ/ಪಶ್ಚಿಮ/ ದಕ್ಷಿಣ/ ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ/ ರಾ.ರಾ.ನಗರ)** |
| 6 | ಶ್ರೀಮತಿ.ಲಕ್ಷ್ಮಿ | ಸದಸ್ಯರು | | |
| 7 | ಶ್ರೀಮತಿ.ಸೀಮಾ ಖಾನಂ | ಸದಸ್ಯರು | 6 | ಕಾ.ಪಾ.ಅ.(ಯೋಜನೆ – **(ಪೂರ್ವ/ ಪಶ್ಚಿಮ/ ದಕ್ಷಿಣ/ ದಾಸರಹಳ್ಳಿ/ ಬೊಮ್ಮನಹಳ್ಳಿ / ಯಲಹಂಕ/ ಮಹದೇವಪುರ/ ರಾ.ರಾ.ನಗರ)** |
| 8 | ಶ್ರೀ.ಎಮ್.ಶಿವರಾಜು | ಸದಸ್ಯರು | | |
| 9 | ಶ್ರೀಮತಿ.ಸರಳ | ಸದಸ್ಯರು | 7 | ತೋಟಗಾರಿಕೆ ಅಧೀಕ್ಷಕರು – **(ಪೂರ್ವ/ಪಶ್ಚಿಮ/ದಕ್ಷಿಣ/ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ/ರಾ.ರಾ.ನಗರ)** |
| 10 | ಶ್ರೀ.ಎಸ್.ಗಂಗಾಧರ್ | ಸದಸ್ಯರು | | |
| 11 | ಶ್ರೀ.ತಿಮ್ಮರಾಜು | ಸದಸ್ಯರು | | |

**(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)**

ಮಾನ್ಯ ಅಧ್ಯಕ್ಷರು ಸಭೆಯ ಅಧ್ಯಕ್ಷತೆ ವಹಿಸಿ ಸಭೆಯಲ್ಲಿ ಹಾಜರಿದ್ದ ಸಮಿತಿ ಸದಸ್ಯರು ಹಾಗೂ ಅಧಿಕಾರಿಗಳಿಗೆ ಹೃತ್ಪೂರ್ವಕವಾದ ಸ್ವಾಗತ ಕೋರಿದರು.

ನಗರವ್ಯಾಪ್ತಿ ಅರಣ್ಯೀಕರಣ ಮತ್ತು ಪರಿಸರ ನಿರ್ವಹಣೆ ಕಾಮಗಾರಿಗಳಿಗೆ ಈಗಾಗಲೇ (ಪಿ.ಓ.ಡಬ್ಲ್ಯೂ) ಕಾರ್ಯಕ್ರಮಕ್ಕೆ ಸಮಿತಿಯು ಅನುಮೋದನೆ ನೀಡಿದ್ದು, ಜರೂರಾಗಿ ಬಾಬ್ ಕೋಡ್ ಪಡೆದು ಕಾಮಗಾರಿಯನ್ನು ಕೈಗೊಳ್ಳುವಂತೆ ಹಾಜರಿದ್ದ ಅಧಿಕಾರಿಗಳಿಗೆ ಸೂಚಿಸಿದರು.

ಪಾಲಿಕೆಯ 198 ವಾರ್ಡ್‌ಗಳಲ್ಲಿ ಬರುವ ಉದ್ಯಾನವನಗಳ ನಿರ್ವಹಣೆ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಕಾರ್ಯಕ್ರಮ ಪಟ್ಟಿಯನ್ನು ತಯಾರಿಸಿ ಸಮಿತಿಯ ಅನುಮೋದನೆ ಪಡೆಯುವ ಬಗ್ಗೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳೊಂದಿಗೆ ಚರ್ಚಿಸಿ, ಕೂಡಲೇ ಸಂಬಂಧಪಟ್ಟ ಅಧಿಕಾರಿಗಳಿಂದ ಮಾಹಿತಿ ಪಡೆದು ಪರಿಶೀಲಿಸಿ ಸಮಿತಿಗೆ ಮಂಡಿಸುವಂತೆ ಸೂಚಿಸಲಾಯಿತು.

ಸಮಿತಿಯ ಮುಂದಿರುವ ವಿಷಯಗಳ ಬಗ್ಗೆ ಅಧ್ಯಕ್ಷರು, ಸಮಿತಿಯ ಸದಸ್ಯರು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿ, ಈ ಕೆಳಕಂಡಂತೆ ತೀರ್ಮಾನವನ್ನು ತೆಗೆದುಕೊಳ್ಳಲಾಯಿತು.

### 1. ವಿಷಯ ಸಂಖ್ಯೆ:ತೋ/ಸ್ಥಾ/ಸ/61/12–13, ದಿನಾಂಕ: 11–02–2013

ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರಕ್ಕೆ ಸೇರಿದ ವಾರ್ಡ್ ಸಂಖ್ಯೆ.125ರ ಮಾರೇನಹಳ್ಳಿ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಉದ್ಯಾನವನಗಳನ್ನು 2012–13ನೇ ಸಾಲಿನ ಆಯವ್ಯಯ ಪಟ್ಟಿಯಲ್ಲಿ ಪಿ–0088 (ಪುಟ ಸಂಖ್ಯೆ.74, ಅನುಬಂಧ–1)ರ ಅಡಿಯಲ್ಲಿ ರೂ.95.00 ಲಕ್ಷಗಳನ್ನು ಮೀಸಲಿರಿಸಲಾಗಿರುತ್ತದೆ. ಇದರಲ್ಲಿ ರೂ.12.00ಲಕ್ಷಗಳನ್ನು ಸದರಿ ಉದ್ಯಾನವನಗಳಲ್ಲಿ ಮರದ ಜಾತಿಯ

ಮುಂದುವರೆದಿದೆ. . . .

ಗಿಡಗಳನ್ನು ನೆಟ್ಟು ಸುಂದರೀಕರಣಗೊಳಿಸುವ ಕೆಲಸಗಳನ್ನು ನಿರ್ವಹಿಸಲು ಅಂದಾಜುಪಟ್ಟಿಯನ್ನು ಪಾಲಿಕೆಯ ತೋಟಗಾರಿಕೆ ಇಲಾಖೆಯ ಅನುಮೋದಿತ ದರಗಳಂತೆ ಸಿದ್ಧಪಡಿಸಲಾಗಿರುತ್ತದೆ. ಆದ್ದರಿಂದ, ಸದರಿ ಸುಂದರೀಕರಣ ಕೆಲಸಗಳನ್ನು ನಿರ್ವಹಿಸಲು ಆಡಳಿತಾತ್ಮಕ ಅನುಮೋದನೆ ಹಾಗೂ ಸಾರ್ವಜನಿಕರ ಕೆಲಸ ಕಾರ್ಯಗಳ ಹಿತದೃಷ್ಠಿಯಿಂದ ಈ ಕೆಲಸಗಳನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ಮುಖಾಂತರ ಕೈಗೆತ್ತಿಕೊಳ್ಳಲು ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:06-02-2013 ರ ಟಿಪ್ಪಣಿ.

| ಕ್ರ. ಸಂ. | ಉದ್ಯಾನವನಗಳ ವಿವರ | ಅಂದಾಜು ವೆಚ್ಚ (ರೂ.ಲಕ್ಷಗಳಲ್ಲಿ) |
|---|---|---|
| 1. | ವಾರ್ಡ್ ನಂ.125 ರ ಎಂ.ಸಿ.ಲೇಔಟ್, ಹೆಚ್.ಟಿ. ಲೈನ್ ಕೆಳಭಾಗ-1 ರಿಂದ 6 ರ ಉದ್ಯಾನವನದಲ್ಲಿ ಮರದ ಜಾತಿಯ ಗಿಡಗಳನ್ನು ನೆಟ್ಟು ಸುಂದರೀಕರಣಗೊಳಿಸುವುದು. | 7.50 |
| 2. | ವಾರ್ಡ್ ನಂ.125ರ ಉದಯಶಾಲೆ ಹಿಂಭಾಗದ ಉದ್ಯಾನವನದಲ್ಲಿ ಮರದ ಜಾತಿಯ ಗಿಡಗಳನ್ನು ನೆಟ್ಟು ಸುಂದರೀಕರಣಗೊಳಿಸುವುದು. | 4.50 |
| | **ಒಟ್ಟು** | **12.00** |

**<u>ನಿರ್ಣಯ</u> : - ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:06-02-2013 ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

**2. <u>ವಿಷಯ ಸಂಖ್ಯೆ:ತೋ/ಸ್ಥಾ/ಸ/62/12-13, ದಿನಾಂಕ: 11-02-2013</u>**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ಯಲಹಂಕ ವಲಯದ ಕಾರ್ಯಪಾಲಕ ಅಭಿಯಂತರರು (ಯೋಜನೆ) ವತಿಯಿಂದ ಯಲಹಂಕ ವಲಯದ ವಾರ್ಡ್ ಸಂಖ್ಯೆ.09 ರಲ್ಲಿ ಬರುವ ಉದ್ಯಾನವನಗಳನ್ನು ಅಭಿವೃದ್ಧಿ ಪಡಿಸಲು ಈಗಾಗಲೇ ಪಾಲಿಕೆಯ ತೋಟಗಾರಿಕೆ ಸ್ಥಾಯಿ ಸಮಿತಿಯಲ್ಲಿ ನಿರ್ಣಯ ಸಂಖ್ಯೆ:ತೋ/ಸ್ಥಾ/ಸ/23/2012-13, ದಿನಾಂಕ:04-10-2012 ರಲ್ಲಿ ವಾರ್ಡ್ ಸಂಖ್ಯೆ.09 ರ ವ್ಯಾಪ್ತಿಗೆ ಸಂಬಂಧಿಸಿದಂತೆ, ಸಮಿತಿಯ ಸದಸ್ಯರುಗಳ ವಾರ್ಡ್‌ಗಳಿಗೆ ಕಾಯ್ದಿರಿಸಿರುವ ಅನುದಾನದಲ್ಲಿ (ರೂ.12000.00ಲಕ್ಷಗಳು) **ರೂ.95.00**ಲಕ್ಷಗಳನ್ನು ಮೀಸಲಿಡಲಾಗಿದ್ದು, ನಿರ್ಣಯವಾಗಿರುತ್ತದೆ.

ಪಾಲಿಕೆಯ 2012-13ನೇ ಸಾಲಿನ ಲೆಕ್ಕ ಶೀರ್ಷಿಕೆ ಪಿಓ-088, ಪಿಓ-1519, ಪಿ-1815, ಪಿ.ಓ-0311, ಪಿ.ಓ-0299 ಅಡಿಯಲ್ಲಿ ರೂ.6000.00ಲಕ್ಷಗಳನ್ನು ಉದ್ಯಾನವನಗಳ ನಿರ್ವಹಣೆಗೆ ರೂ.2800.00ಲಕ್ಷಗಳನ್ನು ಹಂಚಿಕೆ ಮಾಡಿದ್ದು, ರೂ.2000.00ಲಕ್ಷಗಳನ್ನು ವಲಯ ನರ್ಸರಿ ಅಭಿವೃದ್ಧಿಗೆ ಮೀಸಲಿಟ್ಟು ಉಳಿಕೆ 1200.00ಲಕ್ಷಗಳನ್ನು ಸಮಿತಿಯ ಸದಸ್ಯರ ವಾರ್ಡ್‌ಗಳಲ್ಲಿ ಬರುವ ಉದ್ಯಾನವನಗಳನ್ನು ಅಭಿವೃದ್ಧಿಪಡಿಸಲು ಮೀಸಲಿಡಲಾಗಿದೆ. ಅದರಂತೆ, ವಾರ್ಡ್ ಸಂಖ್ಯೆ.09ಕ್ಕೆ **ರೂ.95.00** ಲಕ್ಷಗಳನ್ನು ಹಂಚಿಕೆ ಮಾಡಲಾಗಿರುತ್ತದೆ.

ಈ ಮೇರೆಗೆ ಯಲಹಂಕ ವಲಯದ ಕಾರ್ಯಪಾಲಕ ಅಭಿಯಂತರರು(ಯೋಜನೆ) ವತಿಯಿಂದ ವಾರ್ಡ್ ಸಂಖ್ಯೆ.09 ರ ವ್ಯಾಪ್ತಿಯಲ್ಲಿ, ಈ ಕೆಳಕಂಡಂತೆ ಉದ್ಯಾನವನಗಳನ್ನು ಅಭಿವೃದ್ಧಿಪಡಿಸಲು ಸ್ಥಳೀಯ ಪಾಲಿಕೆ ಸದಸ್ಯರು ಕೋರಿರುತ್ತಾರೆ.

ಮುಂದುವರೆದಿದೆ. . . .

| ಅಭಿವೃದ್ಧಿಪಡಿಸಬೇಕಾಗಿರುವ ಉದ್ಯಾನವನಗಳು | | |
|---|---|---|
| **ಕ್ರ. ಸಂ.** | **ಉದ್ಯಾನವನಗಳ ವಿವರ** | **ಅಂದಾಜು ವೆಚ್ಚ (ರೂ.ಲಕ್ಷಗಳಲ್ಲಿ)** |
| 1. | ವಾರ್ಡ್ ನಂ.09 ರಲ್ಲಿ ಬಿ.ಇ.ಎಲ್. ಬಡಾವಣೆಯ 1ನೇ ಮತ್ತು 3ನೇ ಬ್ಲಾಕ್ ಉದ್ಯಾನವನದಲ್ಲಿ ಮಕ್ಕಳ ಆಟದ ಸಾಮಗ್ರಿಗಳನ್ನು ಅಳವಡಿಸುವುದು, ಸೀನಿಯರ್ ಸಿಟಿಜನ್ ಶೆಲ್ಟರ್ ಹಾಗೂ ಇತರೇ ಕಾಮಗಾರಿಗಳನ್ನು ಅಭಿವೃದ್ಧಿಪಡಿಸುವುದು. | 19.95 |
| 2. | ಎನ್.ಟಿ.ಐ.ಬಡಾವಣೆಯ ಉದ್ಯಾನವನದಲ್ಲಿ ಮಕ್ಕಳ ಆಟದ ಸಾಮಗ್ರಿಗಳನ್ನು ಅಳವಡಿಸುವುದು, ಸೀನಿಯರ್ ಸಿಟಿಜನ್ ಶೆಲ್ಟರ್ ಹಾಗೂ ಇತರೇ ಕಾಮಗಾರಿಗಳನ್ನು ಅಭಿವೃದ್ಧಿಪಡಿಸುವುದು. | 10.00 |
| 3. | ಹೆಚ್.ಎಂ.ಟಿ. ಬಡಾವಣೆಯ 2ನೇ ಮತ್ತು 3ನೇ ಬ್ಲಾಕ್ ಉದ್ಯಾನವನದಲ್ಲಿ ಮಕ್ಕಳ ಆಟದ ಸಾಮಗ್ರಿಗಳನ್ನು ಅಳವಡಿಸುವುದು, ಸೀನಿಯರ್ ಸಿಟಿಜನ್ ಶೆಲ್ಟರ್ ಹಾಗೂ ಇತರೇ ಕಾಮಗಾರಿಗಳನ್ನು ಅಭಿವೃದ್ಧಿಪಡಿಸುವುದು. | 15.00 |
| 4. | ಡಿಫೆನ್ಸ್ ಬಡಾವಣೆಯ ಉದ್ಯಾನವನದಲ್ಲಿ ಮಕ್ಕಳ ಆಟದ ಸಾಮಗ್ರಿಗಳನ್ನು ಅಳವಡಿಸುವುದು, ಸೀನಿಯರ್ ಸಿಟಿಜನ್ ಶೆಲ್ಟರ್ ಹಾಗೂ ಇತರೇ ಕಾಮಗಾರಿಗಳನ್ನು ಅಭಿವೃದ್ಧಿಪಡಿಸುವುದು. | 10.15 |
| 5. | ಕೆನರಾ ಬ್ಯಾಂಕ್ ಲೇಔಟ್ ಬಡಾವಣೆಯ ಉದ್ಯಾನವನವನ್ನು ಭೂವಿನ್ಯಾಸಗೊಳಿಸಿ, ಬೋರ್‌ವೆಲ್ ಕೊರೆಸುವುದು, ಮಕ್ಕಳ ಆಟದ ಸಾಮಗ್ರಿಗಳು ಮತ್ತು ಬೆಂಚುಗಳನ್ನು ಅಳವಡಿಸುವುದು, ಸೀನಿಯರ್ ಸಿಟಿಜನ್ ಶೆಲ್ಟರ್ ಹಾಗೂ ಇತರೇ ಕಾಮಗಾರಿಗಳನ್ನು ಅಭಿವೃದ್ಧಿಪಡಿಸುವುದು. | 19.95 |
| 6. | ತಿಂಡ್ಲು ವೀರಭದ್ರಸ್ವಾಮಿ ದೇವಸ್ಥಾನದ ಉದ್ಯಾನವನದಲ್ಲಿ ಬೋರ್‌ವೆಲ್ ಕೊರೆಸುವುದು, ಪಾತ್‌ವೇ ನಿರ್ಮಾಣ ಮಾಡುವುದು, ಸೀನಿಯರ್ ಸಿಟಿಜನ್ ಶೆಲ್ಟರ್ ಹಾಗೂ ಇತರೇ ಕಾಮಗಾರಿಗಳನ್ನು ಅಭಿವೃದ್ಧಿಪಡಿಸುವುದು. | 19.95 |
| | **ಒಟ್ಟು ಮೊತ್ತ ರೂ.** | **95.00** |

ಮೇಲ್ಕಂಡ ಕಾಮಗಾರಿಗಳನ್ನು 2012-13ನೇ ಸಾಲಿನಲ್ಲಿ ತುರ್ತಾಗಿ ತೆಗೆದುಕೊಳ್ಳಲು ತೋಟಗಾರಿಕೆ ಸ್ಥಾಯಿ ಸಮಿತಿಯ ದಿನಾಂಕ:04-10-2012 ರಂದು ತೀರ್ಮಾನಿಸಿರುವ ಮೇರೆಗೆ, ವಾರ್ಡ್ ಸಂಖ್ಯೆ.09 ರ ಉದ್ಯಾನವನಗಳ ಅಭಿವೃದ್ಧಿಗಾಗಿ ರೂ.95.00 ಲಕ್ಷಗಳಲ್ಲಿ ಸಮಿತಿ ಸದಸ್ಯರ ಅನುದಾನದಡಿಯಲ್ಲಿ ಮೀಸಲಿರಿಸಿರುವ ಮೊತ್ತದಲ್ಲಿ ಕೆ.ಆರ್.ಐ.ಡಿ.ಎಲ್.ಸಂಸ್ಥೆ ಮುಖೇನ ನಿರ್ವಹಿಸಲು ಹಾಗೂ ಮೇಲ್ಕಂಡ ಕಾಮಗಾರಿಗಳನ್ನು ಕೈಗೊಳ್ಳಲು ಆಡಳಿತಾತ್ಮಕ, ತಾಂತ್ರಿಕ ಅನುಮೋದನೆ ಮತ್ತು ಕೆಲಸದ ಸಂಕೇತ ನೀಡಲು ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ **ದಿನಾಂಕ:28-01-2013 ರ ಟಿಪ್ಪಣಿ.**

**ನಿರ್ಣಯ : - ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:28-01-2013ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

## 3. ವಿಷಯ ಸಂಖ್ಯೆ:ತೋ/ಸ್ಥಾ/ಸ/63/12-13, ದಿನಾಂಕ: 13-02-2013

ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರಕ್ಕೆ ಸೇರಿದ ವಾರ್ಡ್ ಸಂಖ್ಯೆ.126ರ ಮಾರುತಿಮಂದಿರ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಉದ್ಯಾನವನಗಳನ್ನು 2011-12ನೇ ಸಾಲಿನ ಆಯವ್ಯಯ ಪಟ್ಟಿಯಲ್ಲಿ ಪಿ-0311 ಮತ್ತು ಪಿ-0088 ರ ಅಡಿಯಲ್ಲಿ ರೂ.6.10 ಲಕ್ಷಗಳನ್ನು ಮೀಸಲಿರಿಸಲಾಗಿರುತ್ತದೆ. ಇದರಲ್ಲಿ

ಮುಂದುವರೆದಿದೆ. . . .

ರೂ.6.10 ಲಕ್ಷಗಳನ್ನು ಸದರಿ ಉದ್ಯಾನವನಗಳಲ್ಲಿ ಮರದ ಜಾತಿಯ ಗಿಡಗಳನ್ನು ನೆಟ್ಟು ಸುಂದರೀಕರಣಗೊಳಿಸಲು ಮತ್ತು ಖಾಸಗಿ ನಿರ್ವಹಣೆಗೊಳಪಡಿಸಲು ಅಂದಾಜುಪಟ್ಟಿಯನ್ನು ಪಾಲಿಕೆಯ ತೋಟಗಾರಿಕೆ ಇಲಾಖೆಯ ಅನುಮೋದಿತ ದರಗಳಂತೆ ಸಿದ್ಧಪಡಿಸಲಾಗಿರುತ್ತದೆ. ಆದ್ದರಿಂದ, ಸದರಿ ಸುಂದರೀಕರಣ/ನಿರ್ವಹಣೆ ಕೆಲಸಗಳನ್ನು ನಿರ್ವಹಿಸಲು ಆಡಳಿತಾತ್ಮಕ ಅನುಮೋದನೆ ಹಾಗೂ ಸಾರ್ವಜನಿಕರ ಕೆಲಸ ಕಾರ್ಯಗಳ ಹಿತದೃಷ್ಠಿಯಿಂದ ಈ ಕೆಲಸಗಳನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ಮುಖಾಂತರ ಕೈಗೆತ್ತಿಕೊಳ್ಳಲು ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ **ದಿನಾಂಕ:12-02-2013 ರ ಟಿಪ್ಪಣಿ.**

| **ಕ್ರ. ಸಂ.** | **ಉದ್ಯಾನವನಗಳ ವಿವರ** | **ಅಂದಾಜು ವೆಚ್ಚ (ರೂ.ಲಕ್ಷಗಳಲ್ಲಿ)** |
|---|---|---|
| 1. | ವಾರ್ಡ್ ನಂ.126 ರ ವಿನಾಯಕ ಬಡಾವಣೆ ಉದ್ಯಾನವನದಲ್ಲಿ ಮರದ ಜಾತಿಯ ಗಿಡಗಳನ್ನು ನೆಟ್ಟು ಸುಂದರೀಕರಣಗೊಳಿಸಿ ಅಭಿವೃದ್ಧಿಪಡಿಸುವ ಬಗ್ಗೆ. (ಜಾಬ್ ಸಂ.126-12-000071) ಪಿ-0311 | 400000.00 |
| 2. | ವಾರ್ಡ್ ನಂ.126 ರ ವಿನಾಯಕ ಬಡಾವಣೆ ಉದ್ಯಾನವನವನ್ನು ಖಾಸಗಿ ನಿರ್ವಹಣೆಗೊಳಪಡಿಸುವ ಬಗ್ಗೆ. (ಜಾಬ್ ಸಂ.126-12-000070) ಪಿ-0088 | 209014.00 |

**<u>ನಿರ್ಣಯ</u> : - ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:12-02-2013ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

*4. <u>ವಿಷಯ ಸಂಖ್ಯೆ:ತೋ/ಸ್ಥಾ/ಸ/64/12-13, ದಿನಾಂಕ: 13-02-2013</u>*

ಗಾಂಧಿನಗರ ವಿಧಾನಸಭಾ ಕ್ಷೇತ್ರಕ್ಕೆ ಸೇರಿದ ವಾರ್ಡ್ ಸಂಖ್ಯೆ.94ರ ಗಾಂಧಿನಗರ ವ್ಯಾಪ್ತಿಯಲ್ಲಿ ಬರುವ ಸ್ವಾತಂತ್ರ್ಯ ಉದ್ಯಾನವನದಲ್ಲಿ ಹೊಸ ಮೋಟಾರ್ ಪಂಪ್, ಪ್ಯಾನೆಲ್ ಬೋರ್ಡ್ ಖರೀದಿಸಿ ಅಳವಡಿಸಿ ನೀರನ್ನು ಪೂರೈಸುವ ಕೆಲಸವನ್ನು ನಿರ್ವಹಿಸಲು ರೂ.3.10ಲಕ್ಷಗಳಿಗೆ ಅಂದಾಜುಪಟ್ಟಿಯನ್ನು ಲೋಕೋಪಯೋಗಿ ಇಲಾಖೆಯ ಅನುಮೋದಿತ ದರಗಳಂತೆ ಸಿದ್ಧಪಡಿಸಲಾಗಿರುತ್ತದೆ. ಆದ್ದರಿಂದ, ಸದರಿ ನಿರ್ವಹಣೆ ಕೆಲಸಗಳನ್ನು ನಿರ್ವಹಿಸಲು ಆಡಳಿತಾತ್ಮಕ ಅನುಮೋದನೆ ಹಾಗೂ ಸಾರ್ವಜನಿಕರ ಕೆಲಸ ಕಾರ್ಯಗಳ ಹಿತದೃಷ್ಠಿಯಿಂದ ಈ ಕೆಲಸಗಳನ್ನು ಕೆ.ಆರ್.ಐ.ಡಿ.ಎಲ್., ಬೆಂಗಳೂರು ಸಂಸ್ಥೆಯ ಮುಖಾಂತರ ಕೈಗೆತ್ತಿಕೊಳ್ಳಲು ಹಾಗೂ ಈ ಸಂಬಂಧ ತುರ್ತು ಕಾಮಗಾರಿಗಳಡಿ ಪಿಓ-541 ಅಡಿಯಲ್ಲಿ ಜಾಬ್ ಸಂಖ್ಯೆ ನೀಡಲು ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ **ದಿನಾಂಕ:09-02-2013 ರ ಟಿಪ್ಪಣಿ.**

| **ಕ್ರ. ಸಂ.** | **ಉದ್ಯಾನವನಗಳ ವಿವರ** | **ಅಂದಾಜು ವೆಚ್ಚ (ರೂ.ಲಕ್ಷಗಳಲ್ಲಿ)** |
|---|---|---|
| 1. | ವಾರ್ಡ್ ಸಂಖ್ಯೆ.94, ಸ್ವಾತಂತ್ರ್ಯ ಉದ್ಯಾನವನದಲ್ಲಿ ಹೊಸ ಮೋಟಾರ್ ಪಂಪ್, ಪ್ಯಾನೆಲ್ ಬೋರ್ಡ್ ಖರೀದಿಸಿ ಅಳವಡಿಸಿ ನೀರನ್ನು ಪೂರೈಸುವ ಬಗ್ಗೆ. | 3.10 |

**<u>ನಿರ್ಣಯ</u> : - ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:09-02-2013ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

ಮುಂದುವರೆದಿದೆ. . . .

**5. <u>ವಿಷಯ ಸಂಖ್ಯೆ:ತೋ/ಸ್ಥಾ/ಸ/66/12-13, ದಿನಾಂಕ: 13-02-2013</u>**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ರಾಜರಾಜೇಶ್ವರಿನಗರ ವಲಯ ವ್ಯಾಪ್ತಿಯ ವಾರ್ಡ್ ನಂ.129ರ ರೈಲ್ವೇ ಮೆನ್ಸ್ ಸೊಸೈಟಿ ಹಾಗೂ 'ಡಿ' ಗ್ರೂಪ್ ಆರ್.ಹೆಚ್.ಸಿ.ಎಸ್. ಉದ್ಯಾನವನಗಳಿಗೆ ಆಸ್ತಿ ಸಂರಕ್ಷಿಸುವ ಕಾಮಗಾರಿಯ ಅಂದಾಜು ರೂ.76.70ಲಕ್ಷಗಳಿಗೆ ಕೈಗೊಳ್ಳಲು ದಿನಾಂಕ:22-11-2012 ರಲ್ಲಿ ಇ-ಪ್ರಕ್ಯೂರ್‌ಮೆಂಟ್ ದ್ವಿ-ಲಕೋಟೆ ಪದ್ಧತಿಯಲ್ಲಿ 2ನೇ ಕರೆಯಾಗಿ ಟೆಂಡರ್ ಕರೆಯಲಾಗಿತ್ತು. ಇದರಲ್ಲಿ ಆರು (06)ಜನ ಗುತ್ತಿಗೆದಾರರು ಪ್ರತಿಕ್ರಿಯಿಸಿದ್ದು, ಸದರಿಯವರು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಿ ಇವರುಗಳಲ್ಲಿ ಶ್ರೀ.ಎಸ್.ಮಂಜುನಾಥ್, ಗುತ್ತಿಗೆದಾರರು ಕನಿಷ್ಠ ದರದ ಟೆಂಡರ್ ಆಗಿದ್ದು, ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ ರೂ.76,64,885.52ಗಳಿಗೆ ಶೇಕಡ 13.588 ಕಡಿಮೆ ದರದಲ್ಲಿ ಕಾಮಗಾರಿಯನ್ನು ನಿರ್ವಹಿಸಲು ರೂ.6623382.57ಗಳಿಗೆ ಟೆಂಡರ್ ನಮೂದಿಸಿರುತ್ತಾರೆ. ಮಾನ್ಯ ಆಯುಕ್ತರ ದಿನಾಂಕ:14-02-2012ರ ಆದೇಶದ ಪ್ರಕಾರ, ಈ ಕನಿಷ್ಠ ದರದ ಗುತ್ತಿಗೆದಾರರ ಟೆಂಡರ್‌ನ್ನು ಅನುಮೋದಿಸಿ ಕಾಮಗಾರಿಯನ್ನು ಕೈಗೊಳ್ಳಲು ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:11-02-2013 ರ ಟಿಪ್ಪಣಿ.

**<u>ನಿರ್ಣಯ</u> : - ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:11-02-2013ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

**6. <u>ವಿಷಯದ ಸಂಖ್ಯೆ:ತೋ/ಸ್ಥಾ/ಸ/67/12-13, ದಿನಾಂಕ: 15-02-2013</u>**

2012-13ನೇ ಸಾಲಿನ ಆಯವ್ಯಯ ಪುಸ್ತಕದ ಪುಟ ಸಂಖ್ಯೆ.75 ರಲ್ಲಿ, ಲೆಕ್ಕ ಶೀರ್ಷಿಕೆ ಪಿ-2578, ಉದ್ಯಾನವನಗಳು (ಅಭಿವೃದ್ಧಿ) ಯೋಜನೆ ಕಾಮಗಾರಿಗಳು ಅಡಿಯಲ್ಲಿ ವಾರ್ಡ್ ಸಂಖ್ಯೆ.126ರ ಕೆನರಾ ಬ್ಯಾಂಕ್ ಕಾಲೋನಿಯ ಉದ್ಯಾನವನ ಅಭಿವೃದ್ಧಿಗೆ ರೂ.200.00 ಲಕ್ಷಗಳ ಅನುದಾನವನ್ನು ಮೀಸಲಿರಿಸಿದ್ದು, ಸದರಿ ಅನುದಾನವನ್ನು ಬಳಸಿಕೊಂಡು ಈ ಕೆಳಕಂಡ 6 ಕಾಮಗಾರಿಗಳನ್ನು ಒಟ್ಟು ರೂ.200.00 ಲಕ್ಷಗಳ ಅಂದಾಜಿನಲ್ಲಿ ಕೈಗೊಳ್ಳಲು ತೀರ್ಮಾನಿಸಲಾಗಿರುತ್ತದೆ.

ಸದರಿ ಉದ್ಯಾನವನವನ್ನು ಅಭಿವೃದ್ಧಿಪಡಿಸುವುದು ಸಾರ್ವಜನಿಕ ಹಿತದೃಷ್ಠಿಯಿಂದ ಅತ್ಯಾವಶ್ಯಕವಾಗಿದ್ದು, ಈಗಾಗಲೇ 2010-11ನೇ ಸಾಲಿನಲ್ಲಿ ಸದರಿ ಉದ್ಯಾನವನಕ್ಕೆ ಹಾಳಾಗಿದ್ದ ತಡೆ ಗೋಡೆಯನ್ನು ಪುನರ್ ನಿರ್ಮಾಣ ಮಾಡಲಾಗಿದ್ದು, ಇನ್ನೂ ಬಾಕಿ ಇರುವ ಉದ್ಯಾನವನದ ಸಿವಿಲ್ ಕಾಮಗಾರಿಗಳು ಹಾಗೂ ಇನ್ನಿತರೇ ಉದ್ಯಾನವನದ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡು ಸದರಿ ಉದ್ಯಾನವನವನ್ನು ಸಾರ್ವಜನಿಕ ಬಳಕೆಗೆ ತುರ್ತಾಗಿ ಉಪಯೋಗಿಸಿಕೊಳ್ಳುವುದು ಅತ್ಯಾವಶ್ಯಕವಾಗಿದ್ದು ಆದಕಾರಣ, ಈ ಕೆಳಕಂಡ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಅನುಮೋದನೆಗಾಗಿ ಸಲ್ಲಿಸಿದೆ.

| ಕ್ರ. ಸಂ. | ಉದ್ಯಾನವನಗಳ ವಿವರ | ಅಂದಾಜು ವೆಚ್ಚ (ರೂ.ಲಕ್ಷಗಳಲ್ಲಿ) |
|---|---|---|
| 1. | Improvements to Canara Bank Colony Park in ward No.126 | 94.60 |
| 2. | Ornamental Grill Fencing to Canara Bank Colony Park in Ward No.126 | 27.40 |
| 3. | Providing and Sinking and Commissioning 2 No. of Borewell at Canara Bank Colony in Ward No.126. | 8.00 |

ಮುಂದುವರೆದಿದೆ. . . .

| | | |
|---|---|---|
| 4. | Construction of Watchmen Shed and Development work at Canara Bank Colony in Ward No.126. | 10.00 |
| 5. | Landscaping Development work at Canara Bank Colony park and other Park in Ward No.126 | 40.00 |
| 6. | Providing park Lighting, Musical System etc to Canara Bank Colony park in Ward No.126 | 20.00 |
| | **Total Rs.** | **200.00** |

ಮೇಲ್ಕಂಡ ಕಾಮಗಾರಿಗಳನ್ನು 2012–13ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ ಪಿ–2578 ಅಡಿಯಲ್ಲಿ ಕೈಗೆತ್ತಿಕೊಂಡು ಕಾರ್ಯಗತಗೊಳಿಸಲು ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ **ದಿನಾಂಕ:14–02–2013 ರ ಟಿಪ್ಪಣಿ.**

**<u>ನಿರ್ಣಯ</u> : – ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:14–02–2013 ರ ಟಿಪ್ಪಣಿಯನ್ನು ಒಪ್ಪುತ್ತಾ, ಸದರಿ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ, ಕೆ.ಆರ್.ಐ.ಡಿ.ಎಲ್.ಸಂಸ್ಥೆ ವತಿಯಿಂದ ಕೈಗೊಳ್ಳಲು ಸಮಿತಿಯು ತೀರ್ಮಾನಿಸಿತು.**

7. <u>ವಿಷಯ ಸಂಖ್ಯೆ:ತೋ/ಸ್ಥಾ/ಸ/68/12–13, ದಿನಾಂಕ: 19–02–2013</u>

ವಾರ್ಡ್ ಸಂಖ್ಯೆ.181ರಲ್ಲಿರುವ ಸೆಂಟ್ ಫಿಲೋಮಿನಾ ಶಾಲೆಯ ಹತ್ತಿರದ ಉದ್ಯಾನವನವನ್ನು ಅಭಿವೃದ್ಧಿಪಡಿಸಲು ಸನ್ಮಾನ್ಯ ಉಪ ಮುಖ್ಯಮಂತ್ರಿಗಳು, ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆರವರಿಗೆ ಟಿಪ್ಪಣಿ ಬರೆದಿರುತ್ತಾರೆ. ಸದರಿ ಉದ್ಯಾನವನವನ್ನು ಅಭಿವೃದ್ಧಿಪಡಿಸಲು ರೂ.5.00ಲಕ್ಷಗಳಿಗೆ ಅಂದಾಜುಪಟ್ಟಿ ತಯಾರಿಸಲಾಗಿರುತ್ತದೆ. 2012–13ರ ಆಯವ್ಯಯದ ಲೆಕ್ಕ ಶೀರ್ಷಿಕೆ ಪಿ0311ರಲ್ಲಿ ಉದ್ಯಾನವನಗಳ ಅಭಿವೃದ್ಧಿಗಾಗಿ ರೂ.5.00ಲಕ್ಷಗಳು ಕಾಯ್ದಿರಿಸಲಾಗಿರುತ್ತದೆ.

ಸದರಿ ಉದ್ಯಾನವನದ ಅಭಿವೃದ್ಧಿಗಾಗಿ ರೂ.5.00ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಜಾಬ್‌ಕೋಡ್‌ಗಾಗಿ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ: 17–02–2013 ರ ಟಿಪ್ಪಣಿ.

| ಕ್ರ. ಸಂ. | ಉದ್ಯಾನವನಗಳ ವಿವರ | ಅಂದಾಜು ವೆಚ್ಚ (ರೂ.ಲಕ್ಷಗಳಲ್ಲಿ) |
|---|---|---|
| 01 | ವಾರ್ಡ್ ಸಂ.181 ರಲ್ಲಿನ ಸೆಂಟ್ ಫಿಲೋಮಿನಾ ಶಾಲೆಯ ಹತ್ತಿರದ ಉದ್ಯಾನವನವನ್ನು ಅಭಿವೃದ್ಧಿಗೊಳಿಸುವ ಬಗ್ಗೆ. | **5.00 ಲಕ್ಷಗಳು** |

**<u>ನಿರ್ಣಯ</u>:– ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:17–02–2013ರ ಟಿಪ್ಪಣಿಯನ್ನು ಒಪ್ಪುತ್ತಾ, ಸದರಿ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ, ಕೆ.ಆರ್.ಐ.ಡಿ.ಎಲ್.ಸಂಸ್ಥೆ ವತಿಯಿಂದ ಕೈಗೊಳ್ಳಲು ಸಮಿತಿಯು ತೀರ್ಮಾನಿಸಿತು.**

8. <u>ವಿಷಯ ಸಂಖ್ಯೆ:ತೋ/ಸ್ಥಾ/ಸ/69/12–13, ದಿನಾಂಕ: 19–02–2013</u>

ಗಾಂಧಿನಗರ ವಿಧಾನಸಭಾ ಕ್ಷೇತ್ರಕ್ಕೆ ಸೇರಿದ **ವಾರ್ಡ್ ಸಂಖ್ಯೆ.94ರ ಗಾಂಧಿನಗರ** ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಉದ್ಯಾನವನಗಳಿಗೆ 2011–12ನೇ ಸಾಲಿನ ಆಯವ್ಯಯ ಪಟ್ಟಿಯಲ್ಲಿ **ಪಿ–1887ರ**

ಮುಂದುವರೆದಿದೆ. . . .

ಅಡಿಯಲ್ಲಿ **ರೂ.12.82 ಲಕ್ಷಗಳನ್ನು** ಮೀಸಲಿರಿಸಲಾಗಿರುತ್ತದೆ. ಈ ಅನುದಾನದಲ್ಲಿ ಸದರಿ ಉದ್ಯಾನವನಗಳಲ್ಲಿ ಮರದ ಜಾತಿಯ ಗಿಡಗಳನ್ನು ನೆಟ್ಟು ಸುಂದರೀಕರಣಗೊಳಿಸುವ ಕೆಲಸಗಳನ್ನು ನಿರ್ವಹಿಸಲು ಅಂದಾಜುಪಟ್ಟಿಯನ್ನು ಪಾಲಿಕೆಯ ತೋಟಗಾರಿಕೆ ಇಲಾಖೆಯ ಅನುಮೋದಿತ ದರಗಳಂತೆ ಸಿದ್ಧಪಡಿಸಲಾಗಿರುತ್ತದೆ.

ಆದ್ದರಿಂದ, ಸದರಿ ಸುಂದರೀಕರಣ ಕೆಲಸಗಳನ್ನು ನಿರ್ವಹಿಸಲು ಆಡಳಿತಾತ್ಮಕ ಅನುಮೋದನೆ ಹಾಗೂ ಸಾರ್ವಜನಿಕರ ಕೆಲಸ ಕಾರ್ಯಗಳ ಹಿತದೃಷ್ಠಿಯಿಂದ ಈ ಕೆಲಸಗಳನ್ನು **ಕೆ.ಆರ್.ಐ.ಡಿ.ಎಲ್. ಸಂಸ್ಥೆಯ** ಮುಖಾಂತರ ಕೈಗೆತ್ತಿಕೊಳ್ಳಲು ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ **ದಿನಾಂಕ:17-02-2013ರ ಟಿಪ್ಪಣಿ.**

| **ಕ್ರ. ಸಂ.** | **ಉದ್ಯಾನವನಗಳ ವಿವರ** | **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)** |
|---|---|---|
| 1. | ವಾರ್ಡ್ ನಂ.94ರ ಸ್ವಾತಂತ್ರ್ಯ ಉದ್ಯಾನವನದಲ್ಲಿ ಮರದ ಜಾತಿಯ ಗಿಡಗಳನ್ನು ನೆಟ್ಟು ಸುಂದರೀಕರಣಗೊಳಿಸುವ ಬಗ್ಗೆ. | 12.82 |

**<u>ನಿರ್ಣಯ</u>: – ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:17-02-2013ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

**9. <u>ವಿಷಯ ಸಂಖ್ಯೆ:ತೋ/ಸ್ಥಾ/ಸ/70/12-13, ದಿನಾಂಕ: 21-02-2013</u>**

ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರಕ್ಕೆ ಸೇರಿದ ವಾರ್ಡ್ ಸಂಖ್ಯೆ.125ರ ಮಾರೇನಹಳ್ಳಿ ವ್ಯಾಪ್ತಿಯಲ್ಲಿ ಬರುವ, ಈ ಕೆಳಕಂಡ ಉದ್ಯಾನವನಗಳ ಅಭಿವೃದ್ಧಿ ಕಾಮಗಾರಿಗಾಗಿ 2012-13 ರ ಲೋಕೋಪಯೋಗಿ ಇಲಾಖೆಯ ದರಪಟ್ಟಿ ಹಾಗೂ ಅನುಮೋದಿತ ದರಪಟ್ಟಿ ಅನ್ವಯ ರೂ.83.00 ಲಕ್ಷಗಳಿಗೆ ಅಂದಾಜುಪಟ್ಟಿಯನ್ನು ತಯಾರಿಸಲಾಗಿದ್ದು, ಸದರಿ ಕಾಮಗಾರಿಗಳಿಗೆ 2012-13ನೇ ಸಾಲಿನ ಆಯವ್ಯಯದಲ್ಲಿ ವಾರ್ಡ್ ಸದಸ್ಯರ ಅನುದಾನದಡಿಯಲ್ಲಿ ರೂ.95.00ಲಕ್ಷಗಳನ್ನು **(ಪಿ-0088)** ಮೀಸಲಿರಿಸಲಾಗಿರುತ್ತದೆ. ತೋಟಗಾರಿಕೆ ಸ್ಥಾಯಿ ಸಮಿತಿಯ ದಿನಾಂಕ:04-10-2012ರ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದ ವಿಷಯದ ಸಂಖ್ಯೆ:ತೋ/ಸ್ಥಾ/ಸ/23/2012-13, ದಿನಾಂಕ:04-10-2012ರಲ್ಲಿ ಸದರಿ ಕಾಮಗಾರಿಗಳಿಗೆ ಟೆಂಡರ್ ಕರೆದು ಟೆಂಡರ್ ಪ್ರಕ್ರಿಯೆ ನಡೆಸುವ ಹಂತದಲ್ಲಿ ತುಂಬಾ ವಿಳಂಬವಾಗುವ ಪ್ರಯುಕ್ತ ಸದಸ್ಯರ ಅನುದಾನವನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ವಹಿಸಿ ಕಾಮಗಾರಿಗಳನ್ನು ಕೈಗೊಳ್ಳಲು ಸಮಿತಿಯು ತೀರ್ಮಾನಿಸಲಾಗಿರುತ್ತದೆ.

ಆದ್ದರಿಂದ, ಸದರಿ ಕಾಮಗಾರಿಗಳಿಗೆ ತೋಟಗಾರಿಕೆ ಸ್ಥಾಯಿ ಸಮಿತಿಯ ನಿರ್ಣಯದಲ್ಲಿ ತಿಳಿಸಿರುವಂತೆ, ವಾರ್ಡ್ ಸದಸ್ಯರ ಅನುದಾನವನ್ನು ನಿಯಮಾನುಸಾರ ಟೆಂಡರ್ ಪ್ರಕ್ರಿಯೆ ಮುಖಾಂತರ ವಹಿಸಿ ಕಾಮಗಾರಿಗಳನ್ನು ಕೈಗೊಳ್ಳಲು ತೀರ್ಮಾನಿಸಿರುವುದರಿಂದ, ಈ ಕೆಳಕಂಡ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಜಾಬ್ ಕೋಡ್ ನೀಡುವ ಕುರಿತು ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ **ದಿನಾಂಕ:21-02-2013 ರ ಟಿಪ್ಪಣಿ.**

ಮುಂದುವರೆದಿದೆ. . . .

| ಕ್ರ. ಸಂ. | ಉದ್ಯಾನವನಗಳ ವಿವರ | ಅಂದಾಜು ವೆಚ್ಚ (ರೂ.ಲಕ್ಷಗಳಲ್ಲಿ) |
|---|---|---|
| 1. | Providing Children Play Equipments and Sand filling to Children Play area in Nachikethana Park in Ward No.125. | 10.00 |
| 2. | Providing Spike Grill granite benches, Eurocon Ties pathway and other development works in Amarajyothinagara Park in Ward No.125. | 20.00 |
| 3. | Providing and filling sand to Rose Garden and other Development work inPark in Ward No.125. | 10.00 |
| 4. | Construction of Gazebo and Granite in M.C.Layout and Nachikethana Park in Ward No.125. | 13.00 |
| 5. | Providing and filling sand to children play area and other development works in Udayaravi School Park in Ward No.125. | 20.00 |
| 6. | Providing and laying Eurocon Tiles pathway and other development works in Udayaravi Park in Ward No.125. | 10.00 |
| | **Total** | **83.00** |

**<u>ನಿರ್ಣಯ:</u> – ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:21-02-2013 ರ ಟಿಪ್ಪಣಿಯನ್ನು ಒಪ್ಪುತ್ತಾ, ಸದರಿ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ, ಕೆ.ಆರ್.ಐ.ಡಿ.ಎಲ್. ಸಂಸ್ಥೆ ವತಿಯಿಂದ ಕೈಗೊಳ್ಳಲು ಸಮಿತಿಯು ತೀರ್ಮಾನಿಸಿತು.**

## 10. <u>ವಿಷಯ ಸಂಖ್ಯೆ:ತೋ/ಸ್ಥಾ/ಸ/71/12-13, ದಿನಾಂಕ: 22-02-2013</u>

ಪೂಜ್ಯ ಮಹಾಪೌರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಇವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಮರಗಿಡಗಳಿದ್ದು, ಸಾಕಷ್ಟು ರಸ್ತೆಗಳಲ್ಲಿ ಮರಗಳನ್ನು ಅವೈಜ್ಞಾನಿಕವಾಗಿ ನೆಟ್ಟು ಹಾಗೂ ಕೆಲವು ಸಂದರ್ಭಗಳಲ್ಲಿ ಮರಗಳನ್ನು ಕಾರಣವಿಲ್ಲದೇ ಕತ್ತರಿಸುತ್ತಿರುವುದು ಪರಿಸರದ ಮೇಲೆ ಸಾಕಷ್ಟು ಪರಿಣಾಮ ಬೀರುತ್ತಿದೆ. ಆದ್ದರಿಂದ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಮರಗಿಡಗಳನ್ನು ಆನ್‌ಲೈನ್ ವ್ಯಾಪ್ತಿಗೆ ಅಳವಡಿಸಿಕೊಂಡಲ್ಲಿ ಮರಗಳ ಬೆಳವಣಿಗೆ ಮತ್ತು ನಿರ್ವಹಣೆ ಬಗ್ಗೆ ಪರಿಣಾಮಕಾರಿಯಾದ ಗಮನಹರಿಸಬಹುದಾಗಿರುತ್ತದೆ. ಕೆಲವು ಮರಗಳನ್ನು ಕತ್ತರಿಸಲು ಸಾರ್ವಜನಿಕರಿಂದ ದೂರುಗಳು ಬಂದಲ್ಲಿ, ಅದನ್ನು ಕೂಲಂಕುಷವಾಗಿ ಪರಿಶೀಲಿಸಿ ಅನುಪಯುಕ್ತವಾದಲ್ಲಿ ಬೀಳುವ ಸ್ಥಿತಿಯಲ್ಲಿ ಇದ್ದಲ್ಲಿ ಹಾಗೂ ಪ್ರಾಣಹಾನಿಗೆ ಸಂಬಂಧಿಸಿದಂತೆ ಹಾನಿಯುಂಟಾಗುವ ಸಂಭವವಿದ್ದಲ್ಲಿ ಅಂತಹ ಮರಗಳನ್ನು ಮಾತ್ರ ತೆಗೆಯಲು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಮರಗಿಡಗಳನ್ನು ಸಂರಕ್ಷಿಸುವ ಹಿತದೃಷ್ಠಿಯಿಂದ ಆನ್‌ಲೈನ್ ನಿರ್ವಹಣಾ ಪದ್ಧತಿಯನ್ನು ಅಳವಡಿಸಿಕೊಳ್ಳುವುದು ಸೂಕ್ತವಾಗಿರುತ್ತದೆಂದು ಅಭಿಪ್ರಾಯ ವ್ಯಕ್ತಪಡಿಸಿರುವ ಹಿನ್ನೆಲೆಯಲ್ಲಿ, ಮಾನ್ಯ ಆಯುಕ್ತರು, ಸದರಿ ಆನ್‌ಲೈನ್ ಪದ್ಧತಿಯನ್ನು ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ (ಕಿಯೊನಿಕ್ಸ್) ರವರ ವತಿಯಿಂದ

ಮುಂದುವರೆದಿದೆ. . . .

ನಿರ್ವಹಿಸಲು ಸೂಚಿಸಿರುತ್ತಾರೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಮರಗಳ ವ್ಯವಸ್ಥಿತ ನಿರ್ವಹಣಾ ಪದ್ಧತಿಯನ್ನು ಆನ್‌ಲೈನ್ ಮುಖಾಂತರ ಅಳವಡಿಸಲು ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ (ಕಿಯೊನಿಕ್ಸ್)ರವರು ಒಪ್ಪಿಗೆ ಸೂಚಿಸಿರುತ್ತಾರೆ. ಸದರಿ ಕಾಮಗಾರಿಗೆ **ರೂ.32.25 ಲಕ್ಷಗಳು** ವೆಚ್ಚವಾಗುತ್ತದೆ.

ಸದರಿ ಕಾಮಗಾರಿಯನ್ನು ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ (ಕಿಯೊನಿಕ್ಸ್) ರವರಿಂದ ತೆಗೆದುಕೊಳ್ಳಲು ಹಾಗೂ **ರೂ.32.25** ಲಕ್ಷಗಳ ವೆಚ್ಚಕ್ಕೆ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ **ದಿನಾಂಕ:21–02–2013 ರ ಟಿಪ್ಪಣಿ.**

**ನಿರ್ಣಯ:–** **ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:21–02–2013ರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.**

ಕೊನೆಯದಾಗಿ, ಈ ಸಭೆಯಲ್ಲಿ ಮೇಲಿನ ವಿಷಯದ ಬಗ್ಗೆ ಚರ್ಚಿಸುವಾಗ ಅಧಿಕಾರಿಗಳ ಸಲಹೆ ಹಾಗೂ ಸಮಿತಿಯ ಸದಸ್ಯರ ಸಲಹೆಗಳನ್ನು ಪಡೆದು ನಿರ್ಣಯ ಕೈಗೊಂಡು ಕಾಮಗಾರಿಗಳನ್ನು ಕೈಗೊಳ್ಳಲು ಕಾರ್ಯಪ್ರವೃತ್ತರಾಗಬೇಕೆಂದು, ಮಾನ್ಯ ಆಯುಕ್ತರನ್ನು ಕೋರುತ್ತಾ, ವಂದನೆಗಳೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಅಧ್ಯಕ್ಷರು
ತೋಟಗಾರಿಕೆ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಂದುವರೆದಿದೆ. . . .